ಪೆರಾಲ್ಬ್ರಾ

ವೆಂಕಟೇಶ ಮಾಗಡಿ

ಪುರವರ್ಣನ
ಒಂದು ಪ್ರಸಂಗ
ಕೆಲವು ಚಿತ್ರಗಳು
ಮಾಲಿಂಗಣ್ಣನ ಕಥೆ
ಎಲ್ಲಿಯ ಭೂಮಿ ಅದೆಲ್ಲಿಯ ಗಗನ ?
ಸತಿಗೆ
ಮೆರವಣಿಗೆ
ಕೋಡಿಯ ಬಳಿ ಅವನು/ಳು
ಪರಿಸೆಯಲ್ಲಿ
ಪ್ರಯೋಗಶಾಲೆಯಲ್ಲಿ
ಕೆಂಚಿ ದ್ಯಾಮರ ಕಥೆ
ಕಾಲ ಅಂದರೆ
ಒಂದು ಹಳ್ಳಿಯಲ್ಲಿ ಏನಾಯಿತೂ ಅಂದರೆ
ಸತ್ಯದ ನೆನಪು
ಧವಳಪ್ಪನ ಗುಡ್ಡದಲ್ಲಿ
ಸರಿಗಮ ಪದ

ಪೊಖ್ರಾ ಪ್ರಕಟಣೆಯಲ್ಲಿ ಸಹಕರಿಸಿದ ಗೆಳೆಯರಿಗೆ, ಸಂಪದ, ಅಕ್ಷರ, ವಿಕಾಸಕ್ಕೆ ಕೃತಜ್ಞತೆಗಳು.

—ಎಚ್. ಎಸ್. ವಿ.

ಪುರವರ್ಣನ

ಮೊನ್ನೆ ಪತ್ರಿಕೆಯೊಂದರಲ್ಲಿ ಅಚ್ಚಾದಂತೆ
ನಮ್ಮೂರು ಒಂದು ಸುಂದರಗ್ರಾಮ ಲಾಲಿಸಿ
ತಗ್ಗಿಗಿಳಿಯದೆ ಎತ್ತರಕ್ಕೆ (ಹೊಗೆ) ಏರುವುದು
ನೀರು ಹೊಯ್ದರೆ ಮಲ್ಲಿಗೆ ಮೊಗ್ಗು ಅರಳುವುದು !

ಹಚ್ಚ ಎಂದರೆ ನಾಯಿ ಬಗುಳುವುದು ಲೊಚಗುಟ್ಟಿದರೆ
ಬಾಲ ಗುಂಡಾಡುವುದು ಮೈನರೆತ ಹುಡುಗಿಯರ
ಬಾಡಿ ಬಿಗಿಯಾಗುವುದು ಹೇನು ಹೆಕ್ಕಲು ಬಿಚ್ಚಿ
ಮಾರುದ್ದ ಮುಡಿಯುಂಟು ಲಂಗಕ್ಕೆ ಗೆಜ್ಜೆಗಳ

ಹಚ್ಚಿ ಧ್ವನಿಸುವುದುಂಟು ಕೈಮೇಲೆ ಗೌರಿಮುಂಡಿ
ಹಚ್ಚೆ ಹೊಯ್ಸಿದ್ದುಂಟು ನಮ್ಮಜ್ಜಿಗಳು ಅದನು
ಸುಕ್ಕು ಮುಚ್ಚುವುದೀಗ ಹೆಣವ ಹೂಳುವರಿಲ್ಲಿ
ಎದ್ದು ಬಂದಾವೆಂದು ಮೇಲೆ ಮುಳ್ಳಿನ ಕೊಂಪೆ
ಕಲ್ಲುಚಪ್ಪಡಿ ಎಳೆದು ಹುಗ್ಗಿ ಮಾಡುವುದೂ ನಿಜ

ನಿಮ್ಮ ಕಡೆ ಹೇಗುಂಟೊ ಗೆ[…]
ಗಂಡ ಹೆಂಡಿರ ನಡುವೆ ಪಿಳ್ಳೆ[…]
ಉಚ್ಚೆ ಹೊಯ್ಯುವುದುಂಟು[…]
ಚಿತ್ರವಾಗುವುದುಂಟು ಮೇಲ[…]

ಎತ್ತಿದರೆ ತಲೆ ಅಬ್ಬ ಎಂಥ ವೈಭವ ಅಲ್ಲಿ
ತಿಳಿಯಾದ ನೀಲಿ ಹಾರುವ ಮೋಡ ತೇಲುವ ಹಕ್ಕಿ
ರಾತ್ರಿ ಅರಳುವ ಅಸಂಖ್ಯಾತ ನಕ್ಷತ್ರಗಳು
ಹತ್ತು ಹೆಜ್ಜೆಗೆ ಮುಗ್ಗುರಿಸಿ ಮೂರುರುಳಾಗಿ

ದಿಂಡುಗೆಡಿದಿರೊ ಒಂದು ಶರಣಾರ್ತಿ ದೇವರಿಗೆ
ರಂಗಪ್ಪ ಮಾಸ್ತಿಮ್ಮ ಕೆರೆಕೋಡಿ ಕೆಂಚಮ್ಮ
ದೂರದಲ್ಲಿ ಬೈಲು ಬಸವ, ಮರೆತಿದ್ದೆ
ಮರದಲ್ಲಿ ಕೆತ್ತಿಟ್ಟ ಕೊಲ್ಲಾಪುರದ ಲಕ್ಷ್ಮಿ

ಕೊಲ್ಲಾಪುರದ ಲಕ್ಷ್ಮಿ ಇಲ್ಲ್ಯಾಕೆ ಬಂದಳೋ
ಮಾರಿ ಹಬ್ಬದಲ್ಲೆಷ್ಟು ಕೋಣಗಳ ತಿಂದಳೋ

* * * *

ಬಸ್ಸಿಳಿದು ನೇರ ಸಾವಿರ ಹೆಜ್ಜೆ ಮುಂದೆ ಥ
ಕ್ಕನೆ ಎಡಕ್ಕೆ ಕೆಸರಿನ ಹಾವು ಸ್ವಲ್ಪ ನ
ರ್ತನ...ರೆಕ್ಕೆ ಬಡಿತ...ನೇಗಿಲು ಗಾಡಿ ಎತ್ತುಗಳು
ಅಲ್ಲಲ್ಲಿ ಬಲಎಡಾ ಎಡಬಲಾ ಬಲ ಎಡ

ವಟ್ಟಾಗಿ ಸಾಗುವುವು ನಮ್ಮೂರ ಬೀದಿಗಳು
ಎರಡೂ ಪಕ್ಕ ಚರಂಡಿ ಅಲ್ಲಲ್ಲಿ ಅಣೆಕಟ್ಟೆ
ಮಲೆತು ನಾರುವ ಕೊಚ್ಚೆ ಹಚ್ಚನೆಯ ಜೊಂಡುಗಳು
ಅಲ್ಲಿ ಹೇಲುವ ಮಕ್ಕಳ ಸಾಲು ಕುಂಡೆಗಳು

ಮುಂದೆ ಗೋಲಿಗೆ ಪನ್ನ ನಿಮಿರು ಚಿನ್ನಿಗೆ ಬದ್ದ
ಅಲ್ಲಲ್ಲಿ ಓಡಾಡುವಂಥ ಕಾರಂಜಿಗಳು
ಬೆಂಳ ಪಿಚಕಾರಿಗಳು ಚಿತ್ರಮಯ ದಾರಿಗಳು
ಕೊಡಪಾನ ಟೊಂಕದಲಿ ಹೊತ್ತಂಥ ನಾರಿಗಳು

ಅವರ ಪಟ್ಟಾಪಟ್ಟಿ ಬೆವರಿಟ್ಟ ಸೀರೆಗಳು
ತೊಯ್ದು ತೆಗವಿನ ತೊಡೆ ಜೋಲಿ ಹಿಡಿಯುವ ನಡೆ
ತುಂಬಿ ತೊನೆಯುವ ಮೊಲೆ ಹೊತ್ತಿಸುವ ಕಿಚ್ಚುಗಳು
ಕೋಟೆ ಆಚೆಗೆ ಅಗಳು ಅಲ್ಲಿ ಮಲೆಯುವ ನೀರು

ಒಟಗುಡುವ ಕಪ್ಪೆಗಳು ಹದ್ದುಗಳು ಕಾಗೆಗಳು
ನೆಗೆದುಬಿದ್ದಿರುವೊಂದು ದಿಕ್ಕೆಟ್ಟ ನಾಯಿಯು ತೆರಕೊಂಡ ಬಾಯಿಯು
ಒಳಹೊಕ್ಕು ಹೊರಬರುವ ನೊಣಗಳು ನೊಣಗಳು
ವಾಕರಿಸಿ ಮುನ್ನಡೆವ ಜನಗಳು ಜನಗಳು

*   *   *   *

ಶೆಟ್ಟಿಯಂಗಡಿಯಲ್ಲಿ ಬೆವರಿ ನಾರುವ ಬೆನ್ನ
ಅವನ ಮಿರಿಮಿರಿ ಬಣ್ಣ ಅವನ ಪಿಳಿಪಿಳಿ ಕಣ್ಣ
ಕೊನೆಗೆ ಕಟ್ಟಿದ ಪಿಸುರ ನೋಡಬೇಕು
ಅಲ್ಲಿ ಹೊಗೆಗಳ ಕನಸು ವರ್ತುಲಗಳು

ಊದುಗೊಳಪೆಯು ಶಂಖ ಬಾಣಲಿಯು ತಳಮಳ
ಬೀಡಿಹೊಗೆ ಬಿಡುವ ಬಗೆ ಹಲವು ಹನ್ನೊಂದು ನಗೆ
ಒಳಗೆ ಮನೆಮನೆಯಲ್ಲಿ ಮೆತ್ತನೆಯ ಮೈಗಳ
ರಾತ್ರಿ ಅಟ್ಟದ ಮೇಲೆ ಧಿಮ್ಮಿ ಥಕ ಥೈಗಳ

ಬೆಳಗು ಅಗಳಿನ ಆಚೆ ನಿರ್ಲಜ್ಜ ಬೈಗಳ
ಹಾಡು ಹಗಲಲ್ಲಿ ಬೋಡಜ್ಜಿಗಳ ಸುಯ್ಲುಗಳ
ಗೆಜ್ಜೆವಸ್ತ್ರದ ಹೊಸತ ಶಾಸ್ತ್ರಿಗಳ ಕರಿಬೇವು
ತಮ್ಮ ಹಿತ್ತಲ ಪಾಳುಗೋಡೆ ಬಿರಿಸುವುದೆಂಬ

ಶಂಕೆಗಳ ಫಲವಾಗಿ ಅಂಕೆಗಳ ಫಲವಾಗಿ
ಭುಗಿಲೆಂಬ ಕಿಚ್ಚುಗಳ ಊರೆ ಹೊತ್ತುರಿವಂಥ
ಪಾರ್ಟಿಗಳಕಾರ್ಯಗಳ ಲಾಟಿ ಕೋಲಾಟಗಳ
ಕೋರ್ಟಿನೋಡಾಟಗಳ ಕೊನೆಯಿರದ ಕಾಟಗಳ

ಸಿರಿವಂತರೊಳಮನೆಯು ಸಾಘಾದ ಕಾಟುಗಳ
ಅವರ ಹಚ್ಚನೆ ಹೊಟ್ಟೆ ಬೆಮರಿಸುವ ಕೋಟುಗಳ
ಒಳಗಿರುವ ನೋಟುಗಳ ಫಲವೇನು ಗುರುವೆ ?
ಸಮದರ್ಶಿ ಒಳಗೊಳಗೆ ಯಾರ ಕಡೆಗಿರುವೆ ?

* * *

ಊರ ಹೊರಗಿದೆ ಕೆರೆ ಆಸುಪಾಸಲ್ಲಿ ಅದು
ಬಲು ದೊಡ್ಡದೈ ! ತುಂಬಿ ತುಳುಕುವುದು ಮಳೆಗಾಲ
ಬತ್ತಿ ಬರಡಾಗುವುದು ಬಿರಿದು ಬೇಸಗೆಯಲ್ಲಿ
ಒಣಗುವುವು ಫಸಲುಗಳು-ಶಾಸ್ತ್ರಿಗಳ ಮನೆಯಲ್ಲಿ

ಬೇರಿಳಿದ ಅಂಡಿಗರು ಅಂಗೈಯ ಹೊಲದಲ್ಲೆ
ಬೇಸಾಯ ಮಾಡುವರು ಬೆರಳುಗಳ ತುದಿಯಲ್ಲೆ
ಎಲೆಯೊಡೆದು ಗಿಡಬೆಳೆದು ಚಾಪೆಯುಡಿ ಫಲಿಸುವುದು
ಮುದ್ದೆಗಳು ಸೆಡವಾಗಿ ಹೆಂಡಿರಿಗೆ ರೇಗುವುದು

ಅತ್ತ ದೇವಾಲಯದ ಪೌಳಿಯಲಿ ಬಾಲಕರು
ಗಡ್ಡ ಶುರುವಾದವರು ಹದಬಿಸಿಲ ಕಾಯುವರು
ಹಾಡು ಹಗಲಲ್ಲೇನೆ ಕಂಭಗಳ ಹಾಯುವರು
ಕೆನೆಯುವರು ಬಗುಳುವರು ಲೊಚಗುಟ್ಟಿ ಸಾಯುವರು

ಬಲ್ಲಿರಾ ನಾಳೆ ಇವರೇ ಊರ ಹಿರಿಯರು
ಹಳ್ಳಿಯ ಸಮಸ್ತರು ನಮ್ಮೂರ ರಸಿಕರು
ಗೌಡರು ಪಟೇಲರು ಶೆಟ್ಟಿ ಸವಕಾರರು
ಪಂಚರು ಪ್ಯಾಂಟರು ಪೈಜಾಮ ಜುಬ್ಬರು
ಹೂಸಿದರೆ ಗಬ್ಬರು...

ತನ್ಮಧ್ಯೆ...

ಕಕ್ಕಸಿನ ಆಚೆ ಉಪ್ಪಿಯ ಮೆಳೆಯಲ್ಲೊಂದು ಬ
ಣ್ಣದ ಮುಷ್ಟಿಯಲ್ಲಿ ಜಿನುಗುವ ನಾದ
ಕಾದ ಕಬ್ಬಿಣವನ್ನು ಕಮ್ಮಾರ ತದ್ದಾಗ ತಾಳ
ಥಳಥಳ ಕೆಚ್ಚನೆ ಚಿಗುರು ಹೊಲದಲ್ಲಿ

ಉತ್ತ ಸಾಲುಗಳಲ್ಲಿ ಆಸೆಗಳು ಅತ್ತ ಊ
ರಾಚೆ ಎಲಎಲಾ ಆಕಾಶ ಬೀಸುವ ಗಾಳಿ
ಸ್ವಲ್ಪ ಛಳಿ....ಹುಲ್ಲು ಬಣವೆಯ ಹಿಂದೆ
ಬೆಚ್ಚನೆಯ ಉಸಿರಾಟ....ಇಷ್ಟು ಸಾಕು.

ಒಂದು ಪ್ರಸಂಗ

ಮಕ್ಕಳ ವನದಲ್ಲಿ ಅವತ್ತು ಎಂಥದೋ ಪಾರ್ಟಿ
ಸಿನಿಮಾಕ್ಕೆ ಹೊರಟವ ಬೋರ್ಡು ನೋಡಿ ನಿಂತೆ
ಬಣ್ಣದ ಸಂತೆ ಹುಲ್ಲಿನ ಮೇಲೆ ಮಿರುಗುಟ್ಟುವ
ಕಾಮನಬಿಲ್ಲು ಮಕ್ಕಳ ದಿನಾಚರಣೆಯಂತೆ ಪಾರ್ಕಿನಲ್ಲಿ

ಕಿಲಿಕಿಲಿ ಬೊಂಬೆಗಳು ಪುಟುಪುಟು ಹೆಜ್ಜೆಗಳು
ಸೆರಗಿನ ಮರೆಗೆ ಗೆಜ್ಜೆಗಳು ಪೊದೆಗಳಲ್ಲಿ
ಕತ್ತರಿಸಿದ ನವಿಲು ಗಿಣಿ ಗೊರವಂಕ ಹಕ್ಕಿಗಳು
ಎತ್ತುಕತ್ತಿನ ಒಂಟೆಗಳು ನರ ನಾರಿಯರು

ಮತ್ತೂ ಉದ್ದನೆ ಸೆರಗುಗಳು ಉಬ್ಬುಗಳು
ಬಿಗಿದ ಟೈಗಳು ಗೆರೆಮಾಸದ ಕೈಗಳು
ಮೈಗಳು....ಸಿಗರೇಟಿನ ಹೊಗೆಯ ಸುಳಿಗಳು
ಕೆನ್ನೆ ಕುಳಿಗಳು ಕೊಬ್ಬಿದ ಪುಕುಳಿಗಳು

ಮಧ್ಯೆ ಅಷ್ಟೆತ್ತರದ ಸಿಮೆಂಟಿನ ಹಸು
ಅದಕ್ಕೆ ತೆರೆದ ಬಾಯಿ, ಹಸುರಿಗೆ ಚಾಚಿದ ನಾಲಗೆ
ನುಣ್ಣಗೆ ಕೆಂಪಗೆ ಜಾರಲು ಮಕ್ಕಳಿಗೆ
ಹಿಂದಿನಿಂದ ಮೆಟ್ಟಲು ಹತ್ತಲು ಗಂಟಲಿಗೆ

ಗಂಟಲಲ್ಲಿ ಕೂತಿದ್ದಾನೊಬ್ಬ ಕಿಸ್ಕ ಸೂಟಿಗ
ಬಾಗಿದ್ದಕ್ಕೆ ಟೈ ತೂಗಿ, ಸಕ್ಕಿದ್ದಕ್ಕೆ ಹಲ್ಲು ತೊಳಗಿ
ಕಣ್ಣಲ್ಲಿ ಎಂಥದೋ ಬೆಳಕ ಹುಟ್ಟಿಸಿ
ಅದನ್ನು ಸೂಟು ಸ್ಕರ್ಟಿಗೆ ಮುಟ್ಟಿಸಿ

ಗಂಟಲಿಂದ ಒಂದೊಂದೇ ಕರೆದು ಲೊಚಲೊಚ ಮುದ್ದಿಟ್ಟು
ನಾಲಗೆ ಮೇಲೆ ಬಣ್ಣಬಣ್ಣದ ಪುಟಾಣಿ ಜಾರಿಸಿ
ಅವರಮ್ಮ ಅಪ್ಪಗಳ ಪುಳುಕಿಸಿ ಮಕ್ಕಳಿ
ಗಾಡಿಸುತ್ತಿದ್ದಾನೆ ಜಾರು ಬಂಡೆಯಾಟ ಆವಯ್ಯ

ಚಾಚಿದ ಹಸುವಿನ ನುಣ್ಣನೆ ನಾಲಗೆ ಮೇಲೆ
ಜಾರುವ ಬಣ್ಣದ ಬೆರಗಿನ ಮುದ್ದಿನ ಲೀಲೆ
ಒಂದು ನಾಚಿ, ಒಂದು ನಕ್ಕು, ಒಂದು
ಹೆಮ್ಮೆಗೆ ಬೀಗಿ ಜಾರುತ್ತಿದ್ದಂತೆ

ಹೋ ಎಂದು ಕೂಗುತ್ತಾರೆ ತೂಗುತ್ತಾರೆ ಕೈ
ಸುತ್ತು ನೆರೆದ ಜನ ಚಪ್ಪಾಳೆ
ತಟ್ಟುತ್ತಾರೆ ಖುಷಿ ತಾಳದವರು
ಪುಣು ಪುಣು ನೆಗೆಯುತ್ತಾರೆ ಸುಲಿಯುತ್ತಾರೆ ಮೈ

ಜಾರಿ ನಿಂತು ನಗುವ ಮಕ್ಕಳ ಬಳಿ
ಹಾರಿ ತಬ್ಬಿಕೊಳ್ಳುತ್ತಾರೆ ಎದೆ
ಗೆತ್ತಿ ಮುದ್ದಾಡುತ್ತಾರೆ ತಲೆಯ ಮೇ
ಲಿಟ್ಟು ಕುಣಿದಾಡುತ್ತಾರೆ

ಹುಡುಗರು ಕುಣಿಸುತ್ತಾರೆ ಮಕ್ಕಳ
ಹುಡುಗಿಯರು ಕುಣಿಸುತ್ತಾರೆ ಹೊಕ್ಕಳ
ಒಂದು ಬೆಚ್ಚನೆ ಧಾಟಿಗೆ
ಕುಣಿಯುತ್ತವೆ ಮಕ್ಕಳು, ಹೊಕ್ಕಳು...

ಗಂಟಲಿನ ನಾಗರಿಕನ ಬಾಯಿ
ಹಿಗ್ಗಿ ಹಿಗ್ಗಿ ಕೊನೆ ಕೊನೆಗೆ ತಾಗಿ
ದ ಹಾಗಾಗಿ ತಲೆಯ ಸಂಬಂಧ ತಪ್ಪಿ ಮುಸುಡಿಗೆ
ಟೊಪ್ಪಿಗೆಯಾಗಿ ಅದು, ಅರಳಾಗುತ್ತವೆ ಬಾಣಲಿಯಲ್ಲಿ ಛತ್ತ

ಸ್ವಸುಖ ಮಗ್ನ ಈ ಬಣ್ಣದ ಜನ
ಕಾಣದ ಒಬ್ಬಾನೊಬ್ಬ ಧೂರ್ತ
ಹೊಂಚುತ್ತಿದ್ದಾನೆ ಸಿಮೆಂಟಿನ ಗೋವಿಸ
ಹಿಂದೆ...ಕಗ್ರಗೆ ವಿಕಾರ...

ಕಿಸಿದ ಬಟ್ಟೆಯಲ್ಲಿ ತೂರುವ ಚೂರಿ
ಹಾರಿದರೆ ಸೆರಗು ಕೊಬ್ಬರಿ ತುರಿವ ಕರಕರ
ಪಿಸುರುಗಟ್ಟಿ ಕೆಂಪಗುರಿವ ಕಣ್ಣು ಬೆನ್ನಲ್ಲಿ ಹುಣ್ಣು
ಚಾಚಿದ ಬಾಚಿ ಹಲ್ಲು ಅಲ್ಲಿ ಜೊಲ್ಲು

ಮುಚ್ಚದೆ ರೆಪ್ಪೆ ನೋಡುತ್ತಿದೆ ಕ್ರೂರ
ಕುಂದಿತ ತಳಮಳ ಬೆಂಕಿ ಬಯಕೆ
ಹುಡುಗಿಯರ ಬೆಚ್ಚನೆ ತೊಡೆಗೆ
ಬಿಚ್ಚುವ ಬಣ್ಣದ ಕೊಡೆಗೆ, ನುಣ್ಣಗೆ ಸಾದಿದ ಹೊಟ್ಟೆಗೆ

ಚಾಚಿದ ಹಸುವಿನ ಕೆನ್ನಾಲಗೆ
ಅಲ್ಲಿ ಜಾರುವ ಬಣ್ಣಗಳು
ಇದಕ್ಕೆ ಹಾರುವ ಜಾರುವ ತಿಂದು ತೇಗಿ
ಒಂದಾಗುವ ಉರಿ, ಕೆಂಡಗಣ್ಣುಗಳು...

ಬಯಕೆ, ದಿಗಿಲು, ತೊಟ್ಟಿಲು
ಗೊತ್ತಾಗದಂತೆ ಸೂಟಿಗೆ ಸಟಸಟ ಹತ್ತುತ್ತದೆ ಮೆಟ್ಟಿಲು
ಬೆದರುತ್ತವೆ ಬಣ್ಣದ ಮಕ್ಕಳು
ಹೇ ಹೇ ವಿಕಾರ ಕಿರುಚಿ ಹುಡುಗ ಗುಂಡಾಗಿ ಚಿಮ್ಮಲು

ಥಟಕ್ಕನೆ ನಿಂತಿತು ಕುಣಿತ, ಕರಗಿತು
ಸಿಗರೇಟಿನ ಹೊಗೆಯಲ್ಲಿ ನಗೆ
ಗುಜುಗುಟ್ಟಿತು ಮಂದಿ ನರರ ಕೈ ಜಗ್ಗಿ
ಬೆದರಿದರು ನಾರಿಯರು !

ಹುಡುಗ ಗಬ್ಬಾಗಿ ನಾರಿದ
ಸೂಟಿಗ ಬೆದರಿ ನಾಚಿ ಸಿಟ್ಟಾಗಿ
ಅಟ್ಟಿಕೊಂಡೋಡಿದ ಅನಿಷ್ಟವನ್ನು
ಹುಡುಗ ಬಿದ್ದ, ಎದ್ದ, ಹಾರಿ ಜಾರಿ ಓಡಿದ

ಹಿಡಿಯಿರಿ ಹಿಡೀರಿ ಹಿಡೀರೋ
ಮುಟ್ಟುವುದಕ್ಕೆ ಹೇಸಿ ದಾರಿ ಮಾಡಿತು ಮಂದಿ
ಮುಂದೆ ಹುಡುಗ ಹಿಂದೆ ಸೂಟಿಗ
ಓಡಿದರು...ಓಡಿದರು

ಗಲ್ಲಿಗಳಲ್ಲೆಲ್ಲಾ ಸುತ್ತಿ ಹೇಸಿಗೆ ಹೆಜ್ಜೆಗೆಲ್ಲಾ ಹತ್ತಿ
ಜಾರಿ ಗಟಾರಕ್ಕೆ ಏರಿ ದಿಣ್ಣೆಗೆ
ಓಡಿದರು ಓಡಿದರು
ಬೆತ್ತಲಾಗಿ, ಕತ್ತಲಾಗಿ, ಗಾಳಿಯಾಗಿ...

ಕೆಲವು ಚಿತ್ರಗಳು

ನಾಯಕರ ಕೇರಿಗೆ ಬಿದ್ದ ಬೆಂಕಿಗೆ ಊರಗೌಡ
ತನ್ನಂತಸ್ತಿನ ಮನೆಯ ಸುತ್ತ ಚೆರಿಗ ಚೆಲ್ಲಿ
ಕಾವು ಕಟ್ಟು ಕೋಳಿ ನಿವಾಳಿ ಸೂರೆ ಮಾಡಿ
ಕೆಟ್ಟರಾವೆಂದು ಹೈಕಳ ತಟ್ಟಿ ಮಲಗಿಸಿದ.

* * *

ಕಣ್ಮುಚ್ಚಿ ಒಬ್ಬರೊಬ್ಬರ ನೆರಳಲ್ಲಿ ಸ್ವಯಂಪ್ರಭೆಯ ಸೆರಗ ಹಿಡಿದು
ಹತ್ತಿ ಇಳಿದು ಸುತ್ತಿ ಸುಳಿದು ರಾಮ ರಾಮ
ತೇಕಿ ತೆವಳಿ ತೆವಳಿ ತೇಕಿ ರಾಮ ರಾಮ
ಕಣ್ಣುಬಿಡೆಂದಾಗ ಬಿಟ್ಟರೆ ಇದ್ದಲ್ಲೇ ಇದ್ದ ಹನುಮ

* * *

ಕತ್ತಲೆಗೆ ಬೆಂಕಿಹಚ್ಚಿ ಕೈತಟ್ಟಿದರೆ ಬೆಳಕ ಪಕ್ಷಾಂತರ
ಬೆಳಕ ಸೆರೆಗೆ ನೂಕಿ ಉಸುರ ಬಿಟ್ಟರೆ ಥೇಟ್ ಕತ್ತಲ ತರ
ರಕ್ತಬೀಜ ನಾಲಗೆ ಮೇಲೇ ಬೇರೂರಿದಮರ
ನುಂಗಿದರೆ ಚಾಮುಂಡಿ ಹೊಟ್ಟೆ ಸೀಳಿ ಬಂದು ಅವ್ವಾ ಎಂದ ಮಗಧೀರ.

ವರ್ಷ ಋತುವಿನುರಿಬಿಸಿಲಿನಲ್ಲಿ ಶ್ಯಾನುಭೋಗರು ಹಚ್ಚಿದರು ಪುರಾಣ
ಕಾರಣ ಗಿರಿಧಾರಿಯ ಮೇಲೆ ವರ್ಷಾಧಾರೆ, ಗುಡಿಯ ಹಿಂದೆ ಸಮೃದ್ಧಿ
ಗ್ರಹಗಳು ಫಳಫಳ ಚೆನ್ನಾಗಿವೆ ಎಂದು ಗಾಳಿ ವರ್ತಮಾನ
ನಕ್ಕರು ಬುದ್ಧಿವಾನರು ಬಾಯಾರಿಯೂ ಬೆಂಡಾಗದೆ ಲೆಕ್ಕ ಹಾಕಿದರು.

* * *

ಎಷ್ಟೋ ವರ್ಷಕ್ಕೆ ನಷ್ಟವಾಗುವಾಷ್ಲುಜನಕಕ್ಕೆ ಜನಕರಾಗುವ ತವಕ
ತೋರಿದರು ಚಾಚಿದರು ಕೈನಿಲುಕಿತು ಬಿಡು ಗ್ರಹ
ಅಲ್ಲೆ ಒಲೆ ನೆಲೆ ತನನಾನ ಸಂತಾನ ಅಂತಾನೆ
ಆಷ್ಲುಜನಕದ ಸೂರೆ ಸೂರೆ ಕವಚಿ ಗರಬಡಿದರು.

* * *

ಬೆಳಗಾಗೆದ್ದರೆ ವೆಂಕಟೇಶ ಸುಪ್ರಭಾತ ರಿಕ್ಷಕನ ಮೊರೆ
ತ... ಹಿಡಿತ...ಮೋರಿಯಲ್ಲಿ ಸೋಪಿನ ನೊರೆ
ಹೂವಿನ ನಾತ....ಬೆವರಿನ ಕಂಪು ಮಧ್ಯಾಹ್ನ
ರಾತ್ರಿ ಬಿಚ್ಚಿಕೊಳ್ಳುವ ಬಣ್ಣದ ಹಾಸಗೆಗಳು

* * *

ಒಂದು ಹೊತ್ತಿನಲ್ಲಿ ಎದೆ ತೆರೆದ ನಿದ್ದೆ....ಗದ್ದೆ
ಯಲ್ಲಿ ತೂಕಡಿಕೆ...ಹೊಂಡದಲ್ಲಿ ತೇಲುವ ನೀರಿನ ಕನಸು
...ಹಸುರು ಬಯಲಲ್ಲಿ ತೆಳ್ಳಗೆ ಹಾಸಿದ
ಮಣ್ಣಿನ ಮನಸು.

ಮಾಲಿಂಗಣ್ಣನ ಕಥೆ

ನಮ್ಮ ಮಾಲಿಂಗಣ್ಣ ದಿನದ ಐದನೆ ಪೀರಿ
ಯೆಡ್ಡು ಮುಗಿಸೇ ಬಿಟ್ಟು ಬರುವಾಗ ಬಾಯಲ್ಲಿ
ಉತ್ತರಾದೀಗತ್ತು ನೆತ್ತಿ ಮೇಲೆ ಹೊತ್ತು
ಇಷ್ಟು ದಪ್ಪದ ಹೊತ್ತಗೆ ಸ್ಟಾಫು ರೂಮಿಗೆ

ಅವರು ಬಂದಾಗ G.L.R.—N.S.C.
C.R.A. ಮತ್ತು ನಾನು ಕೂತು ಸಾಹಿತ್ಯ
ಗೀಹಿತ್ಯ ಅಂತ ಮಾತಾಡುತ್ತಿದ್ದೆವು. ಮಾಲಿಂಗಣ್ಣನಿಗೆ
ಮುಕ್ಕಾಲು ಗಂಟೆ ನಂತರ ಇನ್ನೊಂದು ತರ

ಗತಿ ಈಗ ಲೀಜರ್ರು ಕುರ್ಚಿಯಲ್ಲಿ ಕುಸಿಕೂತು
ಉತ್ತರಾದಿ ಮುಗಿಸಿ ಪೊನ್ನೆ ಏನಾಯಿತು
ಅಂತೀರ ಅಂತ ಶುರುಮಾಡಿದರು ಕಥೆಗೆ
ಮಾಲಿಂಗಣ್ಣನ ಕಥೆ ನಮಗೆ ತುಂಬಾ ಇಷ್ಟ

ಅವರ ಭಾಷೆ–ಧ್ವನಿ–ಅಭಿನಯ–ಹಾಸ್ಯ
ಬಲು ಹದ. ಕೂತೆವು ಕ್ಲಾಸಿಲ್ಲದವರು
ಕೆಮ್ಮಿ ಮಾಲಿಂಗಣ್ಣ ಪ್ರಾರಂಭಿಸಿದರು
ನಮ್ಮೂರ ಕೆರೆ ಹಿಂದೆ ಗುಡಿ ಇಲ್ವ ಸಾ ?

ನೆಲದಗದೆ ಅದುಂ ಒಳಗೆ ಗವ್ ಎಂಬ ಕ
ಗ್ಗತ್ತಲು. ನಮ್ಮ ಚಿಕ್ಕಣ್ಣ ಗುಡಿ ಪೂಜಾರಿ.
ಇನ್ನೂ ನಸುಕು. ಚಿಕ್ಕಣ್ಣ ಮೈತಕ್ಕಂಡು
ಪೂಜೆಗೆ ಅಂತ ಹೋಗಿದಾನೆ ಗುಡಿತಾವು

ಗುಡಿಗೆ ಬಾಗ್ಲೇ ಇಲ್ಲ. ಇವನು ಲಿಂಗದ ಮುಂದೆ
ನಿಂತು ಕಡ್ಡೀ ಗೀರಿ ನೋಡಿದಾ ಕಿರುಬ ಸಾ!
ಹೆಂಗೆ ಬಂತೋ ಏನೊ ಹಿಂದೆ ಒಚ್ಚಿಕ್ಕಂಡು
ಗುರ್ ಅಂತು ಚಿಕ್ಕಣ್ಣ ಹುಷ್ ಅಂದ!

ಕಿರ್ಬ ಲಿಂಗದ ಹಿಂದಿನಿಂದ ಹಾರಿ
ಗಪ್ಪಂತ ಭುಜ ಹಿಡಿದೆ ಬಿಟ್ಟಿತು ಸಾ
ಚಿಕ್ಕಣ್ಣ ಇಸ್ಸಿ ಅಂತ ಭುಜ ವದರಿ
ಝಾಡಿಸಿದ ಕಿರ್ಬ ಗುಡಿಯಾಚೆ ಕಂಬಿ ಕಿತ್ತು

ಓಡ್ತು. ಚಿಕ್ಕಣ್ಣ ಪೂಜೇಗೀಜೆ ಮುಗಿಸಿ
ಹೂಬುಟ್ಟಿ ಹಿಡ್ಕಂಡು ಊರ ಕಡೆ ಹೊರಟ
ಹೆಗಲ ಮಾಂಸ ಕಿತ್ತು ರಾಣಾರಂಪ
ಸೋರ್ತಿತ್ತು ರಕ್ತ. ಎದುರಿಗೆ ಒಂದ ಜನ ಹೆದರಿ

ಏನಲೇ ಏನಾತೋ ಅಂದರೆ ಚಿಕ್ಕಣ್ಣ
ಅಯ್ ಬೆಕ್ಕು ಎಂಬಂತೆ ತಲೆಯಾಡಿಸಿ
ಕಿರ್ಬ ಕಿರ್ಬಾ ಅಂತ ಗೊಣಗುಟ್ಟಿದ
ಎಂದು ಮಾಲಿಂಗಣ್ಣ ಹೊಟ್ಟೆ ಹಿಡ್ಕಂಡು ಖೊಳ್

ಅಂತ ಒಂದೇ ಸಮನೆ ನಗತೊಡಗಲು
ನಮ್ಮ ಪಕ್ಕೆಗೆ ಚಕ್ಕಳಗುಳಿ ಇಟ್ಟಂತೆ
ಬುಳುಬುಳಾಯಿತು. ಹೊಟ್ಟೆ ತತ್ತರಿಸಿ ಕುಣಿದವು
ಕಣ್ಣಲ್ಲಿ ನೀರು ಉಕ್ಕಿ ರೆಕ್ಕೆ ಬಡಿಯುವ ಹಕ್ಕಿಗಳಂತೆ

೧೪ ಮೊಖ್ತಾ

ಸಗುಗಳು–ಹಾರಾಡಿದವು–ನಡುಹಗಲ ಬಿಳಿಮುಂಗಿಲುಗಳಂತೆ
ಮಾಡಿಯಿಂದಿಳಿವ ಮಲ್ಲುಪಂಚೆಗಳಂತೆ
ಮಠದ ಮೇಲಿನ ಕಾವಿ ತುಕುಡಗಳಂತೆ
ಬಿಸಿಲಿಗೊಣಗಿಟ್ಟ ಗಿಮಿಂಟು ಕಾಚಗಳಂತೆ

ಎಲ್ಲಿಯ ಭೂಮಿ ಅದೆಲ್ಲಿಯ ಗಗನ ?

ತೀರಿದ ಗಂಡನ ಬೆಂಕಿಯ ಮಾಲೆ
ನೆನಪಿನ ಬಳೆಗಳು ಮಾಸಿದ ಓಲೆ
ಹೊಗೆಯುವ ಬೆಂಕಿ, ಚಿಗಿಯುವ ಬೆಂಕಿ
ಸೊರಸೊರ ಶೂನ್ಯವ ನೆಕ್ಕುವ ಬೆಂಕಿ
ಹರಯದ ಹುಡುಗಿಯ ಸಿಡಿಯುವ ಮೈಯಿಗೆ
ಬಣ್ಣದ ಸೀರೆ ಆಗುವ ಹೊತ್ತು
ಎಲ್ಲಿಯ ಭೂಮಿ ಅದೆಲ್ಲಿಯ ಗಗನ ?

ಉರಿಯುವ ಕಣ್ಣು ಉಸುರುವ ಮೂಗು
ಮಿಡಿಯುವ ತುಟಿಗಳು ಹರಿಯುವ ಬೆನ್ನು
ಮೊರೆಯುವ ಗಾಳಿಗೆ ದಿಕ್ಪಾಲಾಲು
ತೂರುವ ಭೀತಿಗೆ ಪ್ರಾಯದ ಹೆಣ್ಣು
ನಡನಡ ನಡುಗುವ ಉತ್ಕಟ ಸಮಯ- ಎಲ್ಲಿಯ...

ಗಾಳಿಯ ಭೀತಿಗೆ ಡವಡವಗುಟ್ಟುವ
ಸೀರೆಯ ರೀತಿಗೆ, ಹೊಟ್ಟೆಯ ಒಳಗೆ
ಹುಟ್ಟುವ ಹಸಿವೆಗೆ, ತೊಡೆಗಳ ನಡುವೆ
ಕೂಗುವ ಕೂಸಿಗೆ, ಬಯಲಿನ ಆಸೆಗೆ

೧೬ ಮೊಖ್ತಾ

ಹೆಣ್ಣಿನ ಆಚೆಗೆ ಹೊರೆಯುಂವ ಮಲೆಯುಂವ
ಮಾಂಸಗಳು, ಎದೆ ನಡುವಳಗೆಲ್ಲೊ
ಅರಗದ ಮುತ್ತು ಒತ್ತುವ ಹೊತ್ತು–ಎಲ್ಲಿಯು...

ಗೋಡೆಗಳಾಚೆಗೆ ಈಚಲು ತೆಂಗು
ಪಿಸುಗುಟ್ಟುವ ಕಸವಿಸಿಗಳು ಬಿಸಿಗಳು
ಹೆಸರರಿಯುದ ಮರ ಗಿಡಗಳು ಬುಡಗಳು
ಈಚೆಗೆ ಬಿಚ್ಚಿದ ಹಾಸಗೆಯಿಂದ
ಕನಸುಗಳೆಷ್ಟೊ ಮೈಮುರಿದೆದ್ದು
ಹೊರಗಾಗಲು ನಿಮಿರಿದ ಬೊಡ್ಡೆಗಳು
ಎತ್ತರ ಎತ್ತರ ಎತ್ತರಕೆದ್ದು
ತಳಪಾತಾಳಕ್ಕೆ ಒತ್ತುವ ಹೊತ್ತು–ಎಲ್ಲಿಯ....

ಸಂಜೆ ಮೋಡಗಳು ರಾತ್ರಿಯ ಮಳೆಗೆ
ಹಿತ್ತಲ ಬಳ್ಳಿಯ ಚಪ್ಪರಸುತ್ತ
ಆಲಿಕಲ್ಲುಗಳು ಹೂಗಳ ಒಳಗೆ
ತಣ್ಣಗೆ ಬೆಚ್ಚಗೆ ಕರಗುವ ಹೊತ್ತು–ಎಲ್ಲಿಯ....

ದೇಹವಿಡೀ ಆವರಿಸಿದ ಬೆಂಕಿಗೆ
ಕಣ್ಣಿನಾಳದಲ್ಲಿ ಕುದಿಯುಂವ ಬೆಂಕಿಗೆ
ಎದೆಗಳ ಮೇಲೆ ಬೆರಳುಂವ ಬೆಂಕಿಗೆ
ತೊಡೆಗಳ ನಡುವೆ ಹೊರಳುವ ಬೆಂಕಿಗೆ
ಕತ್ತಿನಲ್ಲಿ ಒತ್ತಾಡುವ ಬೆಂಕಿಗೆ

ಹೊಟ್ಟೆಯಲ್ಲಿ ಕಾಲೊದೆಯುಂವ ಬೆಂಕಿಗೆ
ನೀರೊರ್ಳದ್ದಿದ ಹೆಣ್ಣಿನ ದಾಹ
ತಣ್ಣಗಾಗಿ ಮೈ ತೇಲಲು ಆಹ ಎಲ್ಲಿಯ....

ಸತಿಗೆ

ಎಲ್ಲೋ ದೂರದಲ್ಲಿ ಉಸಿರಾಡುತ್ತಿರುವ ನನ್ನ ಹುಡುಗಿ
ಕೈಚಾಚಿದರೆ ಸಿಗಬಲ್ಲೆಯಾ ? ನಾನು ನೆನೆಸಿಕೊಳ್ಳುತ್ತಿರುವ ಈ ಹೊತ್ತು
ನನ್ನ ಸ್ಮರಿಸುತ್ತಿದೀಯಾ ? ತಾಳಿ, ಕಾಲುಂಗುರ, ಮೂಗುಬೊಟ್ಟು
ಒತ್ತದಿರುವಾಗಲೂ ಗಮನಿಸುತ್ತಿರುವೆಯಾ ಅರ್ಧಾಂಗಿ ?

ನಮ್ಮ ನಡುವಿನ ಸಂಬಂಧ ಈ ದೂರದಲ್ಲಿ ಹೇಗೆ
ಬಿಗಿಯಲೇ ? ಈ ಗೋಳವನ್ನೆಲ್ಲಾ ಸುತ್ತಿರುವ
ಗಾಳಿಯಷ್ಟೇ ನಮ್ಮ ಸಂಬಂಧ—ನಮ್ಮದೇನು
ನಮ್ಮೆಲ್ಲರ ಸಂಬಂಧ ಇದನ್ನೊಪ್ಪಿದರೆ

ಕಟ್ಟು ಹಾಕಿಸಿರುವ ಮದುವೆಯ ಫೋಟೊ ನಗುತ್ತದೆ
ಪ್ರಿಂಟಾಗದಿದ್ದ ಮಾತ್ರಕ್ಕೆ ಫಿಲ್ಮಿನಲ್ಲಿ ಕ್ಷಣ ಕ್ಷಣಕ್ಕೆ
ಸಾವಿರಾರು ಬಿಂಬಗಳು ಕಣ್ಣುಹೊಡೆದದ್ದು ಸುಳ್ಳೆನ್ನುವುದೆ ?
ತೊಗಲು ಸುಲಿದರೆ ಮಗು ಯಾರನ್ನೂ ಹೋಲುವುದು

ಯೋಚಿಸಲಾರೆ ಕಾಫಿ ಸೋಸಿದರೆ ಗಸಿಯೂ ಬಸಿಯುತ್ತದೆ
ಜಾಳಾಗುತ್ತಿದೆ ನನ್ನ ಮಾನರಕ್ಷಣೆಯ ವಸ್ತ್ರ
ಬೆತ್ತಲಾಗುವ ಮುನ್ನ ಬೇಗ ಬಂದು ಆಲಿಂಗಿಸಿ
ಬಾಗಿಲಾಚೆ ನಿನ್ನ ಕುಮಾರನನ್ನ ಕಾವಲು ನಿಲ್ಲಿಸೆ ಸತೀ...

ಮೆರವಣಿಗೆ

ಮಟಮಟ ಮಧ್ಯಾಹ್ನ ಒಂದು ದಿನ
ರವರವ ಉರಿಮೆ ಮೊರೆತ
ಧಡಕ್ಕನೆದ್ದು ಮಂಪರಲ್ಲಿ ಹೊರಬಂದೆ
ಈ ಉರಿಬಿಸಿಲಲ್ಲಿ ಯಾವ

ದೇವರ ಮೆರವಣಿಗೆ ಎಂಬ ತವಕ
ಕ್ಕೆ ಕೇರಿಯಂ ಹೆಣ್ಣುಗಳೆಲ್ಲಾ
ಕಟ್ಟೆಗೆ ಬಂದು ಹುಬ್ಬೆತ್ತಿದರು
ದೇವರಿರಬಹುದೆ...ಅಲ್ಲಲ್ಲ

ಪಲ್ಲಕ್ಕಿ ಕಾಣುತ್ತಿಲ್ಲ
ಹೆಣವಿರಬಹುದೆ ? ಛೇ ಇರಲಿಕ್ಕಿಲ್ಲ
ಕೇ ಹೇ ಕೇಕೆ ಕೇಳುತ್ತಿದೆ
ಗೆದ್ದ ಕುಸ್ತಿ, ಬೆಳ್ಳಿ ಬಳೆ, ಬಣ್ಣದಂಗಿ ?

ಕಾಣುತ್ತಿಲ್ಲ ಕೊಡೆ....ಬಂದಂತೆ
ಹತ್ತಿರ ಹತ್ತಿರ ಬರೀ ತೊಡೆ
ಗಳು ಕೈಯಲ್ಲಿ ಕರೀಮತ್ತಿ
ತೊಡೆಗಳು ಕಣಗೆಗಳು

ಕುಣಿಯುತ್ತಿವೆ...ಒಂದರ ಮೇಲೊಂದು
ನೆಗೆಯುತ್ತಿವೆ...ಬಿಸಿಲಲ್ಲಿ
ಆ ಪಕ್ಕ ಈ ಪಕ್ಕ
ಆಡುತ್ತಿವೆ...ಕೇಕೆ

ಹಾಕುತ್ತಿವೆ...ಬೀದಿ
ಬಿಡಿಗಳೆಲ್ಲ ಬೋಳು
ಮೆರವಣಿಗೆಯಲ್ಲಿ ಕಣಗೆಗಳು
ಗುಣಿಸುತ್ತ...ಕೂಡುತ್ತವೆ

ಹೆಣ್ಣುಗಳು ಬೆಚ್ಚುತ್ತವೆ
ತೊಡೆಗೆ ಛಳಿ ಹತ್ತುತ್ತವೆ
ನಿಮಿಷದಲಿ ಬಾಗಿಲುಗಳು
ಮುಚ್ಚುತ್ತವೆ...ಕಣಗೆಗಳು

ಕಣಬಿಸಿಲಲ್ಲಿ ಕರ್ರಗೆ
ಹುಳ್ಳಗೆ...ಬೆವರಾಗಿ ನಾರುತ್ತ
ಧೂಳಾಗಿ ಕುಣಿಯುತ್ತ
ಎದೆ ಹೊಟ್ಟೆ ತೊಡೆ ತೆರೆದು

ಅರ್ಥವಿಲ್ಲದ ದಿಗಿಲ ಬಿಚ್ಚುತ್ತವೆ
ತಮ್ಮ ಪಾಡಿಗೆ ತಾವು ಹೆಚ್ಚುತ್ತವೆ
ಕೇರಿಯುದ್ದಕ್ಕೂ ಸಾಗುತ್ತವೆ
ಕಿಟಕಿ ತೆರೆಯುತ್ತವೆ ಕದ ಬಿರಿಯುತ್ತವೆ

ಕೋಡಿಯ ಬಳಿ ಅವನು / ಳು

ಬಟ್ಟೆಯು ಒಗೆದದ್ದಾಯಿತೆ ಹೆಣ್ಣೆ
ಕಲೆಗಳು ತೇಲಿದವೆ ?
ಹೇಗಿವೆ ಕೆರೆಯಲಿ ನೀರು ಕಾಲ್‌ಗಳ
ಕೆರೆಯುವ ಮೀನುಗಳು ?

ಜಾರಿಲ್ಲವ ಕೋಡಿಯ ಕಲ್ಲುಗಳು
ಸಂದಿಯ ಹುಲ್ಲುಗಳು
ಹಚ್ಚಗಿವೆಯ ಹಿಂಡಿದಂತೆ ಹಗುರಾಗುವ
ನಿನ್ನಯ ಸೀರೆಗಳು

ಬಣ್ಣ ಬಿಟ್ಟವೆ ಮೊನ್ನೆ ತಂದ
ಆ ಲಂಗದ ಬಟ್ಟೆಗಳು
(ಕಸಕುವಾಗ ಕುಲುಕುವುದೇತಕೆ ಹುಡುಗಿಯ
ಮೊಲೆಗಳು ಹೊಟ್ಟೆಗಳು ?

ಇಟ್ಟುಗಿಟ್ಟೀಯ ನನ್ನ ಮಲ್ ಮೇಲೆ
ಹಿಂಡಿದ ವಾಯಲ್ಲು
ಈಚೀಚೆಗೆ ಸೀರೆ ಪಂಚೆ ಹತ್ತಿದರೆ
ಮುಂಟ್ಟು ನಿಲ್‌ವುದಂತೆಲ್ಲೆಲ್ಲು

ಎಂಥ ಕಾಲ ಬಂತು ನೋಡೇ ಹುಡುಗಿ
ಕೇಳಿದೆಯಾ ಸುದ್ದಿ ?
ತಂತಿ ಬಿಟ್ಟು ನೀರಿಂದಲೆ ಬೆಂಕಿ
ಎತ್ತುರಂತೆ ಜೋಗಾದಲ್ಲಿ !

ಪರಿಸೆಯಲ್ಲಿ

ತಟ ಪಟ ತಟತಟ ಟಂಟಂ ಟಪಟಪ
ಕಾಸಿ ಬಡಿದರೋ ತಮ್ಮಟೆ
ಬಾರಿಸೆ ಉರುಮೆ ತೂಗಿದ ಮೈ ಪೂ
ಜಾರಿ ಮೈದುಂಬಿ ಚೀತ್ಕರಿಸಿ

ಕಡಿದು ಹಲ್ಲು ಕುದಿ ಕುದಿದು ಕಳ್ಳು ಅದು
ರೆದ್ದಿತು ಮೈ ಪೂರ
ಹರಿದು ಹಾರ, ಹುಡುಗಿಯರ ಗುಬ್ಬಿಗಳು
ಪಟ ಪಟ ಬಡಿದುವು ರೆಕ್ಕೆಗಳ

ಕವಲು ಕೊಂಬಿಗಿಟ್ಟೊತ್ತಿದ ಕೋಣ
ವರ್ರೋ ಎಂದು ವದರಿತು
ತದ್ದು ಮಸೆದ ಕೊಕ್ಕಿನ ರಣಹದ್ದು
ಮಿಂಚಿನ ಪಕ್ಕವ ಝಾಡಿಸಿತು

ಮುಂಡೆ ಮಾರಿಯ ಮೂಗ ಮೂಗುತಿ
ಟಪ್ಪನುದುರಿತು ಉದುರಿತು
ಉರುಳಿತು ಮಡಿಲಿಗೆ ಬೆಳಗಿನಿಂದ ಉಡಿ
ಯಕ್ಕಿ ತುಂಬಿದ ಮಡಿಲಿಗೆ

ಉಚ್ಚಿದ ಕೋಣ ಬದುಕಿನ ಆಸೆ
ಹಚ್ಚಗೆ ಹರಡಿದ ಚಿತ್ರಕ್ಕೆ
ಕೆಂಪಿನ ಅಂಚು ಕಟ್ಟಿಕೊಂಡಿತು
ಅರ್ಥವಾಗದ ವಿಚಿತ್ರಕ್ಕೆ

ಕಣ್ಣುಕಂಗಳ ಕ್ರೂರ ಮೀಸೆಗಳು
ಮಾರಿಯ ಉರಿಯುವ ಮುಸುಡಿಯಲ್ಲಿ
ಮುೂಡಿಕೊಂಡವು....ಕೋಣದ ಜೀವ
ಕಳೆದು ಹೋಯಿತು ಪರಿಸೆಯಲ್ಲಿ

ಪ್ರಯೋಗಶಾಲೆಯಲ್ಲಿ

ಹೃದಯಪರೀಕ್ಷೆಗೆ ಕಪ್ಪೆ ಎದೆ ಕೊಯ್ದು
ಮಿಡಿಯುತ್ತದೆಯೋ ನೋಡಿದರು
ಕಣ್ಣ ವೃತ್ತದಲ್ಲಿ ನೋವು ಸುತ್ತುತ್ತಿತ್ತು
ಉತ್ತರ ಪತ್ರಿಕೆಗೆ ಕಪ್ಪೆಯ ಚಕ್ಕಳ ಅಚ್ಚಾಗುತ್ತಿತ್ತು.

ಎದೆಯ ಇಳಿಜಾರಲ್ಲಿ ಆಡುವ ಶಿಲುಬೆ
ಹೊರಗೆ ಮಳೆ ಒಳಗೆ ಮನೋರಮೆ
ಭೀಮ ತೆಕ್ಕೆಮುಂದಾಗಿ ಬಿದ್ದಾಗ
ಕೀಚಕ ನೆಗೆದುಬಿದ್ದ ದಳದಳ ಹೂವಾಗರಳಿದಳು ದ್ರೌಪದಿ.

ಶಿಲುಬೆಯಲ್ಲಿ ಮಿಡಿಯುತ್ತದೆ ಹೃದಯ
ನೋಯುತ್ತದೆ ಬಾಲೆಯರೆದೆ (ಬಿಗಿಗೆ)
ಎದೆ ಬಿಡಿಸುವ ಚೂರಿ ಜಾರಿಸಿ ಮಿಂಚ
ಆಡಿಸುತ್ತದೆ ಕಣ್ಣ ಬೆಳಕಿಗೆ.

ಸೂರಿನ ತುದಿಗಿದೆ ಶಬ್ದದ ಹೆಣ
ಚಿಪ್ಪಿನಾಸ್ಫೋಟದಮೃತ ಮುಹೂರ್ತಕ್ಕೆ ಕಾಯುತ್ತಾನೆ ಜವಾನ
ಸಿಡಿದೊಡನೆ ಕೈತೊಳೆದು ತಲೆ ತುದಿಗೆ
ಕಪ್ಪರಳಿಸುವ ಮನ ಮುದ್ದಣಗೆ.

ಮಿಡಿಯುತ್ತಿದೆ ಗಡಿಯಾರ
ಕೊಯ್ದು ಬಿಡಿಸಿಟ್ಟ ಕಾಲನ ಎದೆ
ಚುಚ್ಚದೆ ಚುಚ್ಚೇನೆಂದು ಬೆದರಿಸುತ್ತಾ ಸಾಗುತ್ತಿದ್ದಾಗ ಮುಳ್ಳು
ಬಾಗುತ್ತದೆ ಮೆಲ್ಲಗೆ ಬೆಳಕ ತಲೆ ಕತ್ತಲೆ ತೊಡೆಗೆ.

ಕೆಂಚಿ ದ್ಯಾವುರ ಕಥೆ

ದಿನವೆಲ್ಲ ದುಡಿ ಹಿಡಿ ಎರಡು ರೂಪಾಯಿ
ಒಡಪಾಯ್ತು ಕೆಂಚಿ ದ್ಯಾಮುನ ಹೆಂಡತಿ
ಸಾಲುಂಗಳ ನಡುವೆ ದೇಕುವ ತುಂಬು ಬಸುರಿ ನಡು
ಬಿಗಿವ ಜಗ್ಗಿದ ಹೊಟ್ಟೆ ಹೊರೆವ ಹುಡುಗಿ.

ದ್ಯಾಮು ಸ್ವಾಮಿಂಗಳಾಳು ಮಗ ಅವನ ಹೆಗಲ ಮೇ
ಲಿದೆ ಶ್ಯಾನುಭೋಗರ ನೊಗ ಸಾಲು ಹೊಡೆದಾಗಿ
ರಾಗಿ ಬಿತ್ತಿದ್ದಾಗಿ ತದ್ದ ಬೀಜದ ಹೋರಿ
ಗರಿಕೆಯಾಸೆಗೆ ಕತ್ತು ಇಳಿಸೆ ನೆಕ್ಕಲು ಚಾಟಿ

ಉಚ್ಚಿದರೆ ಗೊಬ್ಬರ ಅದರ ಮುಸುಡಿಯ ಮುಂದೆ
ಕನಸುಗಳು ಕೆರೆಯ ಬಯಲಲ್ಲಿ ಅವರೇ ಬಳ್ಳಿ
ದ್ಯಾಮು ಇದರವ್ವನೆಂದೊದ್ದಾಗ ಕನಸು ಹರಿ
ದದರಾಚೆ ಕೆರೆಯ ಬಯಲಲ್ಲಿ ಮಾದರ ಚೆನ್ನ

ಒಗೆದ ಪಂಜರದಲ್ಲಿ ಮುದ್ದು ರಣಹದ್ದು ಕೆ
ಕ್ಕರಿಸಿ ಸುಮಧುರ ಗೀತೆಯೊರಲೆ ದ್ಯಾಮುನು ಬೆಚ್ಚಿ
ಮತ್ತೆ ಕತ್ತಿಳಿಸಿ ಬಿತ್ತನೆ ಸಾಗಿಸಿದ ನೇಗಿ
ಲಿನ ಯೋಗಿ ಆಹ! ನೇಗಿಲಯೋಗಿ ಇತ್ತ

ಹೊಲದಲ್ಲಿ ಸಾಯುತ್ತ ಕೇರಿಯಲ್ಲಿ ಬದುಕುತ್ತ
ಚಿಂದಿ ಹಾಸಗೆಯಲ್ಲಿ ಕಾಲುಗಳ ಜಿದಕುತ್ತ
ರಂಗ ಮರಿಸಿಂಗ ಕೆಂಪಣ್ಣರಾಗಾಗುತ್ತ
ನಿಂಗಿ ಗುರುಸಿದ್ದಿ ಲಕ್ಕವ್ವಗಳನಾಯುತ್ತ

ಬಾಳ ನೂಕುವ ಮೂಕಿನ ಮೇಲೆ ಕೂತ ದನಿ
ನೀಲಿಯಲಿ ಕಣ್ಣು ಬಿತ್ತುವುದೈತೆ ಗೊತ್ತೈತ ?
ಗೊತ್ತೈತ ಬುದ್ದಿ ಮಳೆ ಬಿದ್ದರೊಕ್ಕಲ ಜಾತಿ
ತಮ್ಮ ಹೆಂಡಿರ ಸೈತ ಖುಷಿ ಪಡುವ ಸುದ್ದಿ ?

ಗೌಡ ಬಂದರೆ ಕೈಮುಗಿದು ಆರಡಿಯಾಳು
ಹಲ್ಗಿಂಜಿ ದರವೇಸಿ ಅಂತ ಬೈಗಳ ತಾಳಿ
ಹರಿದ ತುಂಡಿನ ಒಳಗೆ ನಿಮಿರಿ ಮೈಕರಗಿ ಸುಯ್
ಗರೆದು ಬಯ್ಯುತ್ತ ಎತ್ತಿನ ಬಾಲ ಮುರಿದು ಥಾ

ಎಂದು ಬಾಲದ ಹಿಂದೆ ಸಾಗುವುದು ಗೊತ್ತೈತ ?
ತೆಂಕಿಂದ ಬಡಗಕ್ಕೆ ಬಡಗಿಂದ ತೆಂಕಕ್ಕೆ
ರಾತ್ನಾಗ ಕಣ್ಮುಚ್ಚಿ ಹೆಂಡಕ್ಕೆ ಖಂಡಕ್ಕೆ
ಒತರ್ನಾಗ ಎದ್ದು ಮೈಮುರಿದು ಪಿಸುರನು ತೊಡೆದು

ಮುದ್ದೆಗಳ ಗಿಡಿದು ಕಡ್ಡಿಯ ಕೆರೆದು ಪುಸ್ಸಂತ
ಬೀಡಿ ಹೊಗೆ ಉಗಿದು ಗೋಟಡಕೆ ಬಾಯಿಗೆ ಫಕ್ಕ
ನೊಗೆದು ನೇಗಿಲ ಹೊತ್ತು ಹೊತ್ತೇರುತಿರೆ ಸಾಲ
ಹಿಂದೆಯೇ ಸಾಗುವುದು ಎರಡು ಕಾಲಿನ ಬದುಕು

ಶಾಸ್ತ್ರಿಗಳ ಬದಕು ಗೌಡರ ಬದಕು ನಡುವೆ ಕೆಂ
ಗಲಿನಲ್ಲಿ ರಾತ್ರಿ ಬದಗಳ ನಡುವೆ ತಡಿಯಲ್ಲಿ
ಬಾಲಗಳ ಹಿಂದೆ ಸಾಗುವುದು ದ್ಯಾಮು ಬದುಕು
ಹೊಲದಲ್ಲಿ ಹೆಜ್ಜೆಗಳ ಬಿತ್ತಿ ಕಾಯುವ ಬದುಕು

ಕಾಲ ಅಂದರೆ...

ಕಾಲ ಕರ್ರಗೆ ವಿಕಾರ
ಹೊಂಚಿ ಕಾಯುವ ಬೆಕ್ಕು
ಸದಾ ಹರಿವ ನದಿ
ಅಲ್ಲ ಅಲ್ಲವೆ ಅಲ್ಲ

ಕಾಲ ಕೆಂಚಾಪುರದ ಕಾವಲಿನ ಹಾಗೆ
ಹಚ್ಚಗಸ್ಟಗಲಕ್ಕೂ ಹರಡಿರುವುದು
ಸೂಳೆ ಕೆರೆಯಂತೆ ನಿಸ್ಸಂಕೋಚ ಮೈಚಾಚಿ
ಹಾಯಾಗಿ ಹದವಾಗಿ ಮಲಗಿರುವುದು

ಒಗೆದು ಒಣಹಾಕಿರುವ ಹೂಪತ್ತಲದ ಹಾಗೆ
ಹೇಗೆ ಬಯಲಾಗಿದೆ....ಕಂಡ್ಯ ಗೆಳೆಯ ?
ಗಾಳಿ ಸರಬರಿಸಿದರೆ ' ಯಾರದು ? ' ಎಂದು ತಲೆ
ಎತ್ತಿ ' ಪಿಪ್ಪೋ ತಿರಗು,' ಎಂದು ಕಾಲೊದೆಯುವುದು

ಹಗಲ ಮಲ್ಲಿನ ಪಂಚೆ ರಾತ್ರಿ ಬಣ್ಣದ ಸೀರೆ
ಬಿಚ್ಚಿಕೊಳ್ಳುವುದೇ ಸ್ವಾಭಾವಿಕಾ....
ಬೆಳಗು ಬಳ್ಳಿಗಳಿಂದ ಹೊರಟ ಹೂವಿನ ಮನಸು
ಆವರಿಸುವುದು ಬಯಲ ಸಂಜೆಯಲ್ಲಿ

ಅತ್ತೆ ಮಗಳು ಲತಾ ಹಾಗೆ ಬಳ್ಳಿಗಳಿಂದ
ದಳದಳಗಳನ್ನೆಲ್ಲ ಬಿಡಿಸಿಕೊಳ್ಳುವುದು
ಸಿನಿಮ ಬಿಡೆ ಖಂಡ ತುಂಡಿಯರು (ಅಹ!) ಹೊಂಟಾಗ
ತನ್ನ ಪಾಡಿಗೆ ತಾನು ಹಾದಿ ಮೂಡುವುದು

ಮುದುಕಿಯರ ಕೆನ್ನೆಯಲಿ ಕೆನೆಗಟ್ಟುವುದು ಕಾಲ
ಅಜ್ಜಗಳ ಬಾಯಲ್ಲಿ ಸೂರ್ಯಾದಿ ಘಟಿಕ
ಸರಿಯಾಗಿ ಏಳಕ್ಕೆ ನಗು ಹುಟ್ಟಿ–ಸುಮುಹೂರ್ತ–
ಕೂಸು ಬಾಣಂತಿ ಆರೋಗ್ಯ ಹಕ್ಕಿಗಳು
ಅರಿಸಿನದ ಕೊನೆಯಂಚ ರೆಕ್ಕೆಗಳ ಬಡಿಯುತ್ತ
ಹಾರಿ ಸೇರುವವಯ್ಯ ದಿಗ್‌ದಿಗಂತ

ಮಣ್ಣ ಬಣ್ಣದ ತೊಟ್ಟಿಲಲ್ಲಿ ಬೆಳಕಿನ ಮಗು
ಮೈಮುರಿದು ಕಿಲಿಕಿಲಿಸಿ ಕಣ್ಣು ತೆರೆಯುವುದು
ಮಣ್ಣ ಪಾತಿಗಳಲ್ಲಿ ಪ್ರಶ್ನೆಗಳು ತಲೆ ಎತ್ತಿ
ಉತ್ತರದ ಪುಸ್ತಕದ ಹಾಳೆ ಬಿಚ್ಚುವುದು

ಒಂದು ಹಳ್ಳಿಯಲ್ಲಿ ಏನಾಯಿತು ಅಂದರೆ

ಬ್ರಾಂಬ್ರ ಕೇರಿಯಲ್ಲಿ ಗುರುವೆ ತಿಪ್ಪಂಭಟ್ಟರು
ವೇ॥ ಬ್ರ॥ ಕೇ॥ ಕೇ॥ ಸುಬ್ಬಾಜೋಯ್ಸರು
ಹಾಡೆಹಗಲು ಜುಟ್ಟು ಜುಟ್ಟು ಹಿಡಿದು ಹೊಡೆದುಕೊಂಡರು
ಹಾಡೆಹಗಲೆ ಕಾದ ಬೇಕೆ ಹಾಳು ರಂಡೆಗಂಡರು

ಎಂಬುದಾಗಿ ಗುಸು ಗುಸು ಗುಸು ಮೋಟಶಾಸ್ತ್ರಿ ಹೋಟಲ ಪೈ
ಕಡೆಮನೆ ಮೂರ್ತಿಗಳು
ದಿರುವಿಕೊಂಡು ಕೈ ಬಾಯಿ
ಮಾತಾಡಿಕೊಂಡರು

ಇನ್ನು ಕೋಳಿಪುಕುಳಿಯಲ್ಲೆ ಗೌಡ ಬಂದ ಕೇರಿಗೆ!
ರಾತ್ರಿಯೆಲ್ಲ ಗೂರಿಗೆ ಕೆಮ್ಮುತ್ತಿದ್ದ ಗುರುರಾಯರು
ಉಚ್ಚೆ ಹೊಯ್ಯುತ್ತಿದ್ದರು ಅದೇತಾನೆ ಮೋರಿಗೆ
ಅದೇ ಹಾದಿ ಗೌಡ ಬಂದ ಹಾರವರ ಕೇರಿಗೆ

ಶರಣು ಬುದ್ಧಿ ಶರಣು ಗೌಡ ದೊಣ್ಣೆ ಮುಂದೆ ಸಾಗಿತು
(ತಾಯ್ಗಂಡ ಗುರ್ಯ)...(ಹಲ್ಕ ಲೌಡೀ ಮಗ ಗೌಡ)
ಗುರುರಾಯರ ಮುಸುಡಿಯ ನಗೆ ಮೋರಿಯ ನೊರೆಯಂತೆ
ತೋರಿ ಹಾರಿ ತೂರಿತು ಸೆರಗ ಮರೆಯ ಚೊಂಬಿಗೆ

ಅರಿಸಿನ ಬಡಕೊಂಡ ತೊಗಲ ಹೋಳು ಕುಂಡೆ ಸ್ತ್ರೀಯರು
ಹೊರಕಚ್ಚೆಯು ಒಳಕಚ್ಚೆಲ ಹಾ॥ ಕುಂ॥ ಸೌ॥ ವತಿಯರು
ಜೀವಂತ ಸತಿಯರು ಎರಡು ಪೈಲಿಗೆಯು ಮಧ್ಯೆ
ಮುದುಡಿಕೊಂಬ ಮಡಿಗಳು... ತಾಳಿಯಲ್ಲಿ ಹೆಂಗಳು
ಕಪ್ಪು ಕುಣಿಕೆ ಮಧ್ಯೆ ದೀಪ ಉರಿಸುತ್ತಿದ್ದ ಕಂಗಳು
ಬಿಡ್ರೀ ಯಾಕೆ ವರ್ಣನೆ ?...ಎದುರಾದರು ಗೌಡಗೆ

ಜೋಯ್ಸರಿಗೂ (ಜೋಯ್ಸಗು) ಭಟ್ಟರಿಗೂ (ಭಟ್ಟಗು)
ಎರಡು ಮಾತು ಹೇಳಿ ಹೋಗಲಿಕ್ಕೆ ಗೌಡ ಬಂದನು
ಬೆಳಿಗ್ಗೆ ಕಾಫಿ ಹೊತ್ತು....ಶಾಲು ಹೊದ್ದು ಗೌಡ ಬಂದನು
ಸೊಪ್ಪುಸದೆ ಮೇದುಕೊಂಡು ಕಣಗೆ ಕುಟ್ಟಿಕೊಂಡನು

ಚರಟ ಹಿಂಡಿ ಕೊಟ್ಟ ಕಾಫಿಯಲ್ಲಿ ಮೀಸೆ ಅದ್ದಿದ
ಉಗುಳ ಮಧ್ಯೆ ಆಗ ಈಗ ಎರಡು ಮಾತು ಉಗ್ಗಿದ
ನಾವು ...ಮಡ್‌ನನ್ಮಕ್ಕಳು....ಒಡ್ಕಬೈದು ತಲೆಗಳ....
ನೀವು....ಬ್ರಾಂಬ್ರು ...ಹಿಂಗೆ ಹಾದಿ ರಂಪ ಬೀದಿ ರಂಪವ ?

ಎರಡು ಮೊತು ಕಾಫಿ ಶರಣು ನಮಸ್ಕಾರ ಸಿವಸಿವಾ
ಮುಂದೆ ಜೋಯ್ಸರ ಮನೆ ವೈದೀಕದ ವಡೆ ತಿಂದನು
ಎರಡು ಮಾತು ವಡೆ ಕಾಫಿ ಸಿವಾ ಗೌಡ ಹೊಂಟನು
ಬೆಳ್ಳಗೆ ತೆಳ್ಳಗೆ ಚಿಲಿಮಿಲಿ ಗುಬ್ಬಿಗಳನು ಕಂಡನು
ಗಂಟಲಲ್ಲಿ ಸುತ್ತುತ್ತಿದ್ದ ಕಾಫಿ ಬಸಿಯು ಕ್ಯಾಕರಿಸಿ
ಗೂರು ಮುದುಕ ಉಚ್ಚೆ ಮಾಡುತ್ತಿದ್ದ ಆ ಚರಂಡಿಯಲ್ಲಿ
ಥುತ್...ಅಂತ ಉಗಿದನು.

ಸತ್ಯದ ನೆನಪು

ಒಂದು ಹಾಡೇಹಗಲಂ ಇದ್ದಕ್ಕಿದ್ದಂತೆ
'ಭೂಮಿ ದುಂಡಗಿದೆ' ಎಂಬ ನಿಷ್ಠುರ ಸತ್ಯ
ಜಗ್ಗಿ ನಿಲ್ಲಿಸಿತು ಹಾ !
ಪೇಟೆ ಬೀದಿಯ ನಟ್ಟ ನಡುವೆ

ಭೂಮಿ ದುಂಡಗಿದೆ
ಯಂತೆ !
ಶುರುವಾಗಲೇ ಬೇಕು
ನಮ್ಮ ಶೆಟ್ಟಿಗೆ ಮಟ್ಟಿಯಂಚಿನ ತನ್ನ ಕೆಂಗಲು
ಜೌಗಿಗೆ ಜಾರಿದ
ರೆ
ಎಂಬ ಚಿಂತೆ

ಬೆಟ್ಟಗಳು ಇಳಿದು
ಬಸುರಾದಾವು ಕಣಿವೆ
ಗಾಳಿ ಧೂಳಿಗೆ ಗಿಡಮರಗಳ ಎಲೆಎಲೆಗಳು
ತಪತಪನುದುರಿ
ಹಚ್ಚ ಹಸುರಾದರೂ ಆಗಬಹುದಾಕಾಶ

ಜಲಾಶಯಂಕ್ಕೆ ಕೊಕ್ಕಾದಾವು ನಲ್ಲಿ
ಗೌಡರ ಮೇಲಾಗಬಹುದು ಮಲ್ಲಿ!
ಹಾಸಗೆ ಏನೇನೊ ಆಸೆಗೆ
ಆದೀತು ಛಳಿಗೆ ಬೆಚ್ಚನೆ ಹೊದ್ದಿಕೆ

ಕೆರೆ, ತೊರೆ, ಸರೋವರ
ಕಡಲುಂ, ಚುಂಬನಕಟ್ಟೆ
ಯಿಂದ ಮಳೆಯಾದೀತುಂ ಆಕಾಶಕ್ಕೆ

ಚಂದ್ರ ನಕ್ಷತ್ರಗಳು ಆಳದಲ್ಲಿ ಮುಳುಗಿ
ಮರೆಯಾದರೂ ಆಗಬಹುದ್ಯೆ ಖಗೋಲ!
ಹುಡುಗಿಯರ ಲಂಗಗಳು ಹೂಬುಟ್ಟಿ ಆಗಿ
ಅವರ ತೊಡೆ ಕತ್ತರಿ

ಕೊಚ್ಚಿದಿದ್ದಾವೆ ಹುಡುಗಣ್ಣಗಳ ಹೃದಯಗಳ?
ಭಗ್ನ ಪ್ರೇಮಿಗಳಾಗ ಸ್ವರ್ಗಕ್ಕೆ ನೇರ
ಹಾರಬಹುದಲ್ಲವೇ
ಇತ್ಯಾದಿ ಇತ್ಯಾದಿ...

ಧವಳಪ್ಪನ ಗುಡ್ಡದಲ್ಲಿ

ದುರ್ಗದಾಚೆಗೆ ಬಹಳ ದೂರ ಬೆಟ್ಟದ ಹಿಂದೆ
ಕತ್ತು ಮುರಿಯುವ ಎತ್ತರದ ಶಂಖಾಕೃತಿಯ
ಬೆಟ್ಟವೊಂದುಂಟು ಪಟ್ಟು ಬಿಡದೆ ಸುತ್ತಿದರೆ
ಹತ್ತಬಹುದೆಂದು ಯಾರೋ ಅಂದು ತೆಪುರೆದ್ದು

ಸಿಮಿಸಿಮಿ ಕೊಬ್ಬು ಉಮ್ಮಳಿಸಿ ಪಿಟ್ಟೆನ್ನಿಸಿ ಕಟ್ಟಿದ ಕಾಚ
ಎಲ್ಲಿ ಬಾಗಿಲು ಉಂಟೊ ಅಲ್ಲಿ ಗಾಳಿಯ ಪಹರೆ
ಸರಿ ಹೊರಟೆಬಿಟ್ಟೆವು ಐದಂ ಮಂದಿ ಬೆಟ್ಟದ
ಬುಡದಲ್ಲಿ ಒಂದು ಕಗ್ಗಾನು ಗವಿ ಸಾಲಾಗಿ
ಹೊಕ್ಕು ಬಿಟ್ಟರೆ ಕಣ್ಣು ಕರ್ರಗೆ ಅಲ್ಲೆ ಏನೋ
ಸಂಚು ನಡೆಯಿತು
ಹೊಕ್ಕುಳಾಳದಲ್ಲೆಲ್ಲೊ ಒರಲುತ್ತಿತ್ತು ಕಂಡಮ್ಮ
ಕಡ್ಡಿಗೀರಿದರೆ ತಟಕ್ಕನೆ ಅಡ್ಡಗೋಡೆಯು
ಮೇಲೆ, ಮೂಡಿದ
ಸಮೆದ ಬೊಂಬೆಗಳಲ್ಲಿ, ಕಣ್ಣಬೊಂಬೆಗಳಲ್ಲಿ
ತಮ್ಮಷ್ಟಕ್ಕೇ ಹುಟ್ಟಿ ಸುತ್ತಿ ಸಾಯುತ್ತಿದ್ದವು
ಅಲೆಗಳು
ಹಾ ಹಾ...ತೆಳ್ಳನೆ ಹೆಣ್ಣು ಕೊಬ್ಬಿದ ತೊಡೆಗುಜ್ಜಿ

ಗಟ್ಟಿಯಾಗದ ಎಳೆಗಳು
ಅಲ್ಲಿ ಕಪ್ಪುತೊಟ್ಟಿನ ಗಟ್ಟಿಗಳು ಗಿಮಿಗುಟ್ಟಿ
ತಿರುಗುತ್ತಿವೆ
ಹೇಗೋ ಸಾವರಿಸಿ ಸಾಗಿದೆವು ಮುಂದೆ...ಮುಂದೆ
ದಿಣ್ಣೆ ಬಂದರೆ ಹತ್ತಿ ತಗ್ಗು ಬಂದರೆ ಇಳಿದು
ಪಕ್ಕ ತಾಗಿದರೆ ತಣ್ಣಗೆ ಕೊರೆವ ಶೀತಲ
ಇರುವ ಕಾಣದ ತಳ, ಕಾಲ ಕೊರೆಯುವ ಜಲ
ದಾರಿಯುದ್ದಕ್ಕೂ ತುಂಬಿದ ದುಷ್ಟವಾಸನೆ
ನಡುವೆ ಕೊನೆ ಕಾಣಲು

ಬಹಳ ಕಾಲದ ಬಳಿಕ ಕಪ್ಪು ಸೋಸಿದ ಬೆಳಕು
ನಮ್ಮದಲ್ಲವೆ ಅಲ್ಲ ಅಂಥ ಆ ಬೆಳಕಲ್ಲಿ
ಕಂಡೆಬಿಟ್ಟಿತು ಕೊನೆ...

ಕೊನೇ ಕೊನೇ ಹಾ ಹಾ ಕೊನೆ, ಓಹೋ ಕೊನೆ
ತೊನೇ ತೊನೇ ಕುಣಿಯುವಂತೆ ತೆನೆ ಪನೆ
ಎದೆ ಹೃದಯ ಕರುಳು ಕುಸುರು
ಹಾಡಾಗುವಂತೆ ಉಸುರು
ನಿಮಿರುವಂತೆ ಹಸುರು ಪಸುರು
ಕುಣಿಯಿರಿ ಕುಣಿಯಿರೊ ಆಹಾ ಹೈಸ
ಗೆಜ್ಜೆಯ ಕುಟ್ಟಲಿ ಜೋಬಿನ ಪೈಸ
ಭಲಪ್ಪ ಸರ್ದಾರ ಐಸ ಐಸ
ತೊಲಗೇ ಹೋಗಲಿ ತೊಗಲಿನ ಬಟ್ಟೆ
ಧೊಪ್ಪನೆ ಬೀಳಲಿ ಕಾಡುವ ಹೊಟ್ಟೆ
ಸಮೆಯಲಿ ಕೆರ ಸರಸರ ಅದರಟ್ಟೆ
ಕಾಲು ಸೋತು ಮೈಬೆವರಿ ಹೋಗಿ ಕಾಲಲ್ಲಿ ಬೆರಳೆ ಇಲ್ಲ
ಕಪ್ಪುಬಂಡೆಗೆಷ್ಟೆಷ್ಟು ಗುಮ್ಮಿದರು ಹೆಣ್ಣು ಹುಟ್ಟಲಿಲ್ಲ

೩೬ ಪ್ರೊಫೆ

ಕುಣಿದು ಕುಣಿದು ಹರವಾದ ದಿಣ್ಣೆ ಮೇಲೊರಗಿದಂಥ ಎಣ್ಣೆ
ಹರಿಯಂಬಹುದೇನೆ ಹೇಳೆ ಬೇಗ ಕಲ್ಲಾಗಿ ಕೂತ ಹೆಣ್ಣೆ

* * *

ಎಚ್ಚರಾದಾಗ ನಡುಹಗಲು ತಟ್ಟಿದರೆ ಬಾಗಿಲು
ಒಳಗೆ ಗಿಡಿದು ಅಗಳಿ
ಮಲಗಿದ್ದಾರೆ ಅದರಾಚೆ ಯಾರೋ ಮಕ್ಕಳು
ಹುಟ್ಟಬಹುದೇ ಹೊಕ್ಕಳು
ಒಡೆದೊಂದು ಕಮಲದ ಹೂ...?

* * *

ಗುಡ್ಡದ ಗರ್ಭಕೋಶದ ಯಾವ ಕೋಣೆಯಲ್ಲೋ
ಕೈ ಕಾಲು ಬಡಿಯುವ ಮಕ್ಕಳು ನಾವು
ಕಡ್ಡಿ ಗೀರಿದಾಗ ಬಂಡೆಯ ಮೇಲೆ
ಥಟ್ಟನೆ ಮಿಂಚಿದ್ದು
ಮೂರು
ಚೂರು
ಬಳೆ

ಹಿಂದೊಮ್ಮೆ ಆ ತಾವು
ಪಡೆದ ಬೆಚ್ಚನೆ ಕಾವು
ಹೊಮ್ಮಿ ಹೆಪ್ಪಾಗಿರುವ
ಅರ್ಥವಿಲ್ಲದ ಕಂಕಿಲು
ಉತ್ಕಂಠ ಜೀವ ಮುಲುಮುಲಿಸಿ ಚಿಸಿಲೊಡೆದು
ಹೂ ಆದ ಗೀತೆ

ಪಕ್ಕಕ್ಕೆ ಸಾಥಾದ ಹಾಸುಬಂಡೆಯ ಕೆಳಗೆ
ಸುಲಿದೊಗೆದ ಈರುಳ್ಳಿ ಗೆಡ್ಡೆ...ಓ ಕಾತರವೇ !

ಕತೆ ಹೇಳು ಕತೆ ಹೇಳು ಕತೆ ಹೇಳು ಶೇಷ
ಮಳೆಯಿರದ ರಣಬಿಸಿಲ ಈ ಬೋಳು ದಿನಗಳಲಿ
ಧವಳಗಿರಿ ಮೇಲೀಚೆಗೇನೈ ವಿಶೇಷ ?

ಸಿಪ್ಪೆ ಕಳಚಿದ ಗೆಡ್ಡೆ ತೇವದಲಿ ತುಟಿಯೊಡೆದ
ಹಸುರು ಪಸುರಿನ ತೊದಲಿಗೇನರ್ಥ ಶೇಷ
ಧವಳಗಿರಿ ಮೇಲೀಚೆಗೇನೈ ವಿಶೇಷ ?

ಸರಿಗಮಪದ

ಚವರದ ಪಾಚಿನ ಗೋಡೆಗಳಲ್ಲಿ
ಸೋಪನು ಮೆತ್ತಿದ ಕೆನ್ನೆಗಳು ಮೀಸೆಗಳು
ಚಡ್ಡಿಯ ಹುಡುಗಿಯ ಹೊಕ್ಕಳಿನಲ್ಲಿ
ಬಿತ್ತುವ ಬೈತಲೆ ಬಳ್ಳಿಗಳು ಮೊಗ್ಗುಗಳು

ನಲ್ಲಿಯ ಕೆಳಗಡೆ ಮೋರಿಗಳಲ್ಲಿ
ಅರಳುವ ಹುಣಿಸೇ ಬೀಜಗಳು
ಡಬರಿಯ ತಿಕ್ಕುವ ಬೆರಳುಗಳಲ್ಲಿ
ಮಿರುಗುವ ಗಾಜಿನ ಗೋಳಗಳು

ಹುಡುಗಿಯ ಮುಚ್ಚುವ ಕಣ್ಣುಗಳಲ್ಲಿ ಒತ್ತಿದ ಮೀಸೆಗಳು
ಕೆನ್ನೆಗೆ ಜಾರುವ ಹನಿಹನಿಯಲ್ಲಿ ಬೆಚ್ಚನೆ ಮುತ್ತುಗಳು
ಮುದುಕರ ಕಣ್ಣಿನ ಗೂಡುಗಳಿಂದ ಹಾರಿದ ಹೊತ್ತುಗಳು
ಹೆಗಲಲ್ಲಿ ಕಿಲಿ ಕಿಲಿ ಹಕ್ಕಿಗಳು

ಹಳ್ಳಿಯ ಅಳ್ಳೀಕಟ್ಟೆಗಳಲ್ಲಿ ಕೆತ್ತಿದ ಹುಲಿಮನೆ ಚಿತ್ರಗಳಲ್ಲಿ
ಸರಿಯುವ ಕಲ್ಲುಗಳು
ಟೊಂಕದಿ ಮಿಡಿಯುವ ಜಲತರಂಗಗಳ ಹೊತ್ತು ತರುವ
ಹುಡುಗಿಯರ ಕಾಲಲ್ಲಿ

ಚುಚ್ಚುವ ಮುಳ್ಳುಗಳು
ಕಾಲೆತ್ತಲು ಬಳುಕುವ ಮೀನುಗಳು

ಪತ್ರಗಳೊಡೆಯುವ ಮರಗಳ ಪ್ರೀತಿಗೆ
ನಾಚುವ ಬಳ್ಳಿಗಳು
ಒಲೆಯಲಿ ಚಾಚುವ ಹಸಿ ಕಟ್ಟಿಗೆಗೆ
ಬಾಚುವ ಜ್ವಾಲೆಗಳು

ಕುಣಿಯುವ ಬಂಡಿಯ ಕಣಗೆಗಳಲ್ಲಿ
ತುಟಿ ಸವರುವ ಹಿಡಿ ಮುಚ್ಚುಗಳಲ್ಲಿ
ಹೆಂಗಸ್ತನಗಳು ಗಂಡಸ್ತನಗಳು
ಮೊಬ್ಯಾ ಮಿಡಿಯುವ ಹೆಚ್ಚುಗಳಲ್ಲಿ
ಪದ್ಯದ ನಾದಗಳು
ಅಲೆಯುವ ನಾದದ ಹಾಸಗೆಯಲ್ಲಿ
ಹೊರಳುವ ಅರ್ಥಗಳು

ಹರಿಯುವ ನೀರಿನ ಹಾಸಿನ ಮೇಲೆ
ಮಿರಿಯುವ ಹೊಳಕುಗಳು

ಅನುಬಂಧ ಒಂದು

ಪುರವರ್ಣನ :

ಯಾ ಊರಿಗೂ ಹೊಂದಬಹುದಾದ ಮಾತುಗಳನ್ನು ತನ್ನ ಊರಿನವೇ ವೈಶಿಷ್ಟ್ಯಗಳೆಂದು ಹೇಳಿಕೊಳ್ಳುವ ಧಾಟಿಯಲ್ಲೇ ಒಂದು ಬಗೆಯ ವ್ಯಂಗ್ಯವಿದೆ. ಮುಂದೆ ಲಘುವಾದ ವರ್ಣನೆ ಮಾತುಗಳಲ್ಲಿ ತನ್ನ ಊರನ್ನು ವರ್ಣಿಸುತ್ತಾ ಹೋಗುವ ವ್ಯಕ್ತಿ ಒಂದು ಹಂತದಿಂದ ಗಂಭೀರವಾಗುತ್ತಾ ಹೋಗುತ್ತಾನೆ ; ರೋಷಗೊಳ್ಳುತ್ತಾ ಹೋಗುತ್ತಾನೆ. ತನ್ನ ಊರಿನ ಬಗ್ಗೆ ಆತನ ಧೋರಣೆ ಏನೆಂಬುದು ಗೊಂದಲಕ್ಕೀಡಾಗಿ ... ಕೊನೆಗೆ ... ಹಳ್ಳಿಯ ವಿಷಮಜಾಲದ ನಡುವೆಯೂ ಹೊಗರುವ ಬದುಕಿನ ಹರಿಚ್ಛಕ್ತಿಗಾಗಿ ಒಂದು ಬಗೆಯ ಸಮಾಧಾನದಿಂದ ಸದ್ಯಃಸ್ಥಿತಿಯನ್ನು ಒಪ್ಪಿಕೊಳ್ಳುತ್ತಾನೆ.

ಒಂದು ಪ್ರಸಂಗ :

ನಮ್ಮ ಮಾತನ್ನು ನಮಗೇ ಒಪ್ಪಿಸಿ ನಮ್ಮನ್ನು ಮರುಳು ಮಾಡುವ, ರೋಮಾಂಚಗೊಳಿಸುವ ಜಾಣ ನಮ್ಮ ನಾಯಕ. ಬೆಳ್ಳನೆ ಹಸುವಿನ ಕೆಂಪನೆ ನಾಲಗೆ ಹಸುರಿಗೆ ಚಾಚಿರುವುದು ಸಹಜವಾದರೂ ಭಯಾನಕ ಸುಂದರ ಸಮ್ಮೋಹಕ ಶಬ್ದಗಳನ್ನು ಜಾರಿಸುವ ನಮ್ಮ ನಾಯಕ, ಆ ಮಾತುಗಳಿಗೆ ಸಂಭ್ರಮಿಸುತ್ತಾ ವ್ಯಕ್ತಿತ್ವಸ್ಖಲನಮಾಡಿಕೊಳ್ಳುವ ನಮ್ಮ ಜನ, ಇವರ ಸಂಬಂಧ ಸ್ವತಂತ್ರ ಭಾರತದ ಒಂದು ಅದ್ಭುತ ದರಿದ್ರ ದೃಶ್ಯ.

ಕೆಲವು ಚಿತ್ರಗಳು :

ಇವು ಮನಸ್ಸಿನಲ್ಲಿ ಗಟ್ಟಿಯಾಗಿ ನಿಂತ ಕೆಲವು ಸ್ಥಿರದೃಶ್ಯಗಳು. ಒಂದನೆ ಚಿತ್ರದಲ್ಲಿ ರೋಗ ಮತ್ತು ರೋಗನಿದಾನ ಅನ್ಯಕ್ಷೇತ್ರಗಳಲ್ಲಿ ವಿಜೃಂಭಿಸುವ ದುರಂತ. ಎರಡನೆಯದರಲ್ಲಿ ಶ್ರೀಸಾಮಾನ್ಯನ ಗಾಣದೆತ್ತಿನ ಪ್ರಗತಿ. ಮೂರನೆಯದರಲ್ಲಿ ಶಿಸ್ತಿಗೇ ಹುಟ್ಟುವ ದೊಂಬಿಯ ವಿಪರ್ಯಾಸ. ನಾಲ್ಕನೆಯದರಲ್ಲಿ ಮೂರ್ಖತನಕ್ಕೆ ರೋಸಿದ ವ್ಯಂಗ್ಯ. ಐದನೆಯದರಲ್ಲಿ ಸಮಸ್ಯೆಯ ನಿರಂತರತೆ. ಆರು ಏಳರಲ್ಲಿ ಕೆಲವು ಆಶ್ಚರ್ಯತಮ ಭಾವಲಹರಿಗಳು.

ಮಾಲಿಂಗಣ್ಣನ ಕಥೆ :

ಬದುಕಿನ ವಿಷಮ ವರ್ತುಲದ ನಡುವೆ ನಾವು ಪಡುವ ಸುಖ ಶಾಂತಿಯ ಆಭಾಸದ ಕಥೆ

ಎಲ್ಲಿಯ ಭೂಮಿ ಅದೆಲ್ಲಿಯ ಗಗನ ? :

ಯೌವನದಲ್ಲಿ ಗಂಡನನ್ನು ಕಳೆದುಕೊಂಡ ಹತಭಾಗ್ಯೆಯ ಎದೆಗುದಿ ಇದು. ಇಲ್ಲಿ ಯಾವುದು ಪಾಪ ? ಯಾವುದು ಪುಣ್ಯ ? ಜನರ ನಡುವಿದ್ದೇ ಆಕೆ ಒಬ್ಬೊಂಟಿ. ಅವಳೊಬ್ಬಳೇ ಭೂಮಿ ಆಕಾಶದ ಮಧ್ಯೆ ನಿಲ್ಲುವುದು, ಪ್ರಕೃತಿಯ ಮಧ್ಯೆ ನಿಲ್ಲುವುದು. ಆ ಉತ್ಕಟ ಕ್ಷಣಗಳಲ್ಲಿ ತನ್ನ ಆಚೆಗೆ ಹೊರೆವ, ಪುಷ್ಟವಾಗುವ ಮಾಂಸದ ಜೊಂಪೆಗಳನ್ನು ನಿಯಂತ್ರಿಸಲಾಗದ ಆಕೆಯ ಅಶಕ್ತಿ ಈ ಸಮಾಜದ ಚೌಕಟ್ಟಿನಲ್ಲಿ ಆಕೆಯನ್ನು ಎಲ್ಲಿಗೆ ಒಯ್ಯಬಹುದು ಎಂಬುದಕ್ಕೂ ಕೆಲವೇ ಸ್ಪಷ್ಟ ಉತ್ತರಗಳಿವೆ. ಇದು ನಮ್ಮ ಜನರ ಬದುಕಿನ ಸಾಧ್ಯಹರಹನ್ನು ಸೀಮಿತ ಚಾಚುಗಳನ್ನು (limitations) ಸೂಚಿಸುತ್ತದೆ.

ಪತಿಗೆ :

ಸಾಮೀಪ್ಯದಿಂದಲೇ ಸಂಬಂಧಗಳು ಸ್ಥಿರವಾಗುತ್ತಾ ಹೋಗುತ್ತವೆ. ಸಂಬಂಧಗಳು ಸ್ಥಿರವೆನ್ನುವುದು ಸುಳ್ಳೆಂಬ ಸತ್ಯ ಕೆಲವು ವಿಚಿತ್ರ ಸಂದರ್ಭಗಳಲ್ಲಿ ಸ್ಥಿರವಾಗುತ್ತದೆ. ಪ್ರಾಮಾಣಿಕ ನಿಷ್ಠೆ ಆಗ ಮುಖಾಮುಖಿ ಸಂಬಂಧವನ್ನು ಬಯಸಲೇ ಬೇಕು. ಬಯಸುವುದು.

ಅನೇಕ ಸೂಕ್ಷ್ಮಗಳು, ಬಣ್ಣ ವಾಸನೆ ಬಿಸಿಗಳು, ಮೊಖ್ಖಾದಲ್ಲೇ ಹೆಚ್ಚು ಪ್ರಮಾಣದಲ್ಲಿ ಅನುಭವಕ್ಕೆ ಬರುತ್ತವೆ. ಸಂಬಂಧದ ಎಳೆಗಳು ತೆಳ್ಳನೆ ಹೆಣ್ಣು ಕೊಬ್ಬಿದ ತೊಡೆಗುಜ್ಜಿಯೇ ಗಟ್ಟಿಯಾಗಬೇಕಾಗುತ್ತದೆ.

ಮೆರವಣಿಗೆ :

ಮನುಷ್ಯನ ಪಶುಶಕ್ತಿ ವ್ಯಕ್ತವಾಗುವ ರೀತಿ. ಒಂದು ಮಧ್ಯಾಹ್ನ ಒಂದು ಹಳ್ಳಿಯಲ್ಲಿ ನಡೆದ ಮೆರವಣಿಗೆ ಮನಸ್ಸಿನಲ್ಲಿ ಉಂಟುಮಾಡಿದ ದಿಗಿಲಿನ ಮೆರವಣಿಗೆ.

ಪರಿಸೆಯಲ್ಲಿ :

ದೊಂಬಿಯಲ್ಲಿ, ವ್ಯಗ್ರತೆಯಲ್ಲಿ, ಮುಗ್ಧರು ವ್ಯಕ್ತಿತ್ವವನ್ನು ಕಳೆದುಕೊಳ್ಳುವ ದುರಂತದ ಅನುಭವ. ಸಂತೆಯಲ್ಲಿ ಮುದ್ದು ಮಕ್ಕಳು ಕಳೆದು ಹೋಗುವ ಹಾಗೆ ಪರಿಸೆಯ ದೊಂಬಿಯಲ್ಲಿ ಕೋಣ ತನ್ನ ಪ್ರಾಣವನ್ನು ಕಳೆದು ಕೊಳ್ಳುತ್ತದೆ. ಬದುಕಿಗೆ ಮೃತ್ಯು ಅಂಚುಕಟ್ಟುತ್ತದೆ.

ಪ್ರಯೋಗಶಾಲೆಯಲ್ಲಿ :

ಪ್ರಯೋಗಶಾಲೆಯಲ್ಲಿ ಕಪ್ಪೆ ಮಾತ್ರವಲ್ಲ ಅದನ್ನು ಕುಯ್ಯುವ, ಕುಯ್ಯುವುದನ್ನು ನೋಡುವ ಜನರೂ ಇದ್ದಾರೆ. ಕತ್ತರಿಸುವ ಶಕ್ತಿ ಎಲ್ಲವನ್ನೂ ಎಲ್ಲರನ್ನೂ ಬಯಲು ಮಾಡುವುದು, ಕತ್ತರಿಗಳು. ಹಲಸಿನಹಣ್ಣು ಹೆಚ್ಚಿ ತೊಳೆ ಬಿಡಿಸಿಡುವಂತೆ, ನಮ್ಮ ನಿಜಗಳನ್ನು ಬಯಲು ಮಾಡುತ್ತಾ ಹೋಗುತ್ತವೆ. ಕಪ್ಪೆ, ಮಾಸ್ತರು, ಹುಡುಗರು, ಹುಡುಗಿಯರು, ಗಡಿಯಾರ, ಜವಾನ ಎಲ್ಲ ಪರಸ್ಪರ ಕತ್ತರಿಸಿಕೊಳ್ಳುತ್ತಾ ಪ್ರಯೋಗಶಾಲೆಯಲ್ಲಿ ಬಯಲಾಗುತ್ತಾ ಹೋಗುತ್ತಾರೆ.

ಕಾಲ ಅಂದರೆ :

ಕಾಲಕ್ಕೆ ಚಲನಶಕ್ತಿಯನ್ನು ಹೇಳದೆ ಅದು ನಿಶ್ಚಲ ಎಂಬ ಭಾವದಲ್ಲಿ ವರ್ಣಿಸುವ ಪದ್ಯ.

ಸತ್ಯದ ನೆನಪು :

ಯಾರಿಗೂ ಕೆಲವೊಮ್ಮೆ ಬರಬಹುದಾದ ಹುಚ್ಚು ಕಲ್ಪನೆಗಳ ತಾರ್ಕಿಕ ವಿನ್ಯಾಸ. ಕಲ್ಪನೆ ಮತ್ತು ತರ್ಕಗಳ ಹೊಂದಾಣಿಕೆಯೇ ದೊಡ್ಡ ಆಭಾಸ.

ಧವಳಪ್ಪನ ಗುಡ್ಡದಲ್ಲಿ :

ಚಿತ್ರದುರ್ಗದ ಬಳಿ ಇರುವ ಒಂದು ಎತ್ತರದ ಬೆಟ್ಟ ಧವಳಪ್ಪನ ಗುಡ್ಡ. ಶಂಖದ ಹಾಗೆ ಹೊರಗೆ ಒಳಗೆ ಸುತ್ತಿ ಸುತ್ತಿ ಹೊಸೆದಿರುವ ಆ ಶೃಂಗ ಬದುಕಿನ ಹಾಗೇ ಸಂಕೀರ್ಣ. ಕತ್ತಲೆ ತುಂಬಿ ಅಸ್ಪಷ್ಟ. ಕಣ್ಣಿಗೆ ಕಾಣದಂತೆ ತಣ್ಣಗೆ ಹರಿವ ಅಲ್ಲಿನ ಝರಿ ಬದುಕಿನ ನಿರಂತರತೆಯನ್ನು ಸೂಚಿಸಬಹುದು.

ಒಮ್ಮೆ ಐವರು ಸ್ನೇಹಿತರು ಅದನ್ನು ಅತ್ಯಂತ ಪ್ರಯಾಸದಿಂದ ಹತ್ತಿ ಅದರ ನೆತ್ತಿಯನ್ನು ಮೆಟ್ಟಿ, ಕಾಲಿಗೆ ಜಾರಿದರು. ಬರೀ ಹೆಬ್ಬಂಡೆಗಳನ್ನು ಪೇರಿಸಿದ ಬೆಟ್ಟ ಅದು. ಅದರ ತುದಿಯಿಂದ ನೋಡಿದರೆ ಚಿತ್ರದುರ್ಗದ ಬೆಂಕಿಪೊಟ್ಟಣ ಕಾಣುತ್ತದೆ. ನಿಜವಾಗಲೂ ಬದುಕು ಯಾವನೋ ಆಡುವ ಆಟ ಇರಬಹುದು.

ಬೆಟ್ಟದ ತುದಿಯಲ್ಲಿ ಒಂದು ಗವಿ, ಅದರಲ್ಲಿ ಒಂದು ಸಣ್ಣ ನೀರಿನ 'ಕೊಣ' ಇವೆ. ಆ ಕೊಣದ ಬಳಿ ಮಲಗಿರುವ ಹಾಸುಬಂಡೆಯ ಮೇಲೆ ಗಾಜಿನ ಬಳೆಯ ಚೂರುಗಳು ಕಂಡು ಅವರು ಆಶ್ಚರ್ಯ ಸಂಭ್ರಮಿತರಾದರು. ಆ ಮಬ್ಬು ಬೆಳಕಿನಲ್ಲಿ ಆ ಬಳೆಯ ಚೂರುಗಳು ಕಣ್ಣು ಹೊಡೆಯುತ್ತಾ ಅಜ್ಞಾತ ಭಾಷೆ ಒಂದರಲ್ಲಿ ಏನನ್ನೋ ಬರೆದಿದ್ದವು. ಮಣ್ಣಿನಿಂದ ಅಷ್ಟು ದೂರದಲ್ಲಿ ಬಂಡೆಗಳ ನಡುವೆ ಮೊಳಕೆಯೊಡೆಯುತ್ತಿದ್ದ ಒಂದು ಕಡಿದ ಈರುಳ್ಳಿ ಗಡ್ಡೆ ಅದೇನೆಂದು ವಿವರಿಸಬೇಕಾಗಿತ್ತು.

ಬದುಕಿನ ನಿಗೂಢತೆ, ಎಲ್ಲಿ ಬೇಕಾದರೂ ಸೆಲೆಯೊಡೆವ ಅದರ ಜೀವಂತಿಕೆ, ಕಪ್ಪು ಸೋಕಿದ ಬೆಳಕಿನಲ್ಲಿ ಹುದುಗಿಕೊಳ್ಳುವ ಬದುಕಿನ ಉತ್ಕಟ ಕ್ಷಣಗಳು – ಇತ್ಯಾದಿ ಇತ್ಯಾದಿಗಳನ್ನು ಈ ಕವನ ಸೂಚಿಸಬಹುದು.

ಅನುಬಂಧ ಎರಡು

ದಿಂಡುಗೆಡೆ—ದೀರ್ಘದಂಡ ನಮಸ್ಕರಿಸು ೭

ಚೆರಿಗ ಚೆಲ್ಲುವುದು—ಮಾರಿಗೆ ಬಲಿಕೊಟ್ಟ ಕೋಣದ ರಕ್ತವನ್ನು ಊರಿನ ಕ್ಷೇಮಕ್ಕಾಗಿ ಊರ ಸುತ್ತಾ ಚೆಲ್ಲುವುದು ೧೦

ಕಾವು, ಕಟ್ಟು, ಕೋಳಿ, ನಿವಾಳಿ—ಅಶುಭ ಪರಿಹಾರಕ್ಕಾಗಿ ಹಳ್ಳಿಗರು ಮಾಡುವ ತಂತ್ರ ವಿಧಾನಗಳು ೧೦

ಹೊರೆಯುವ— ಪುಷ್ಟವಾಗುವ, ಒದುಕುವ ೧೬

ಉರಿಮೆ—ಒಂದು ಚರ್ಮವಾದ್ಯ ೧೮

ಕರೀಮುತ್ತಿ— ಒಂದು ಜಾತಿಯ ಕಪ್ಪು ಪೈರ ೧೯

ಕಣಗೆ—ಬಂಡಿಯ ಅಂಚಿಗೆ ಜೋಡಿಸುವ ಬಿದುರಿನ ಗೂಟ ೧೮

ಉಚ್ಚಿದ—ತೆಳ್ಳಗೆ ಭೇದಿ ಮಾಡಿದ ೨೩

ಕಣ್ಣು ಕಂಗಳ, ಕ್ವಾರ ಮೀಸೆ - ದೇವಿಯ ಅಲಂಕಾರ; ಬೆಳ್ಳಿಯ ಕಣ್ಣು ಮತ್ತು ಮೀಸೆ ೨೩

ಸಾಲು—ನೇಗಿಲು ಎಳೆದ ತಗ್ಗು ಗೆರೆ ೨೬

ಮೂಕು—ಬಂಡಿಯ ಮುಂಭಾಗದ ಕೊಂಕು, ಮಾತು ಬಾರದ್ದು ೨೭

ಒತರ್ನಾಗ—ಬೆಳಗ್ಗೆ ೨೭

ಕೆಂಚಾಪುರದ ಕಾವಲು—ಕೆಂಚಾಪುರ ಎಂಬ ಊರಿನ ಹುಲ್ಲು ಬಯಲು ೨೮

ಸೂಳೆಕೆರೆ—ಶಿವಮೊಗ್ಗ ಜಿಲ್ಲೆಯ ಒಂದು ದೊಡ್ಡಕೆರೆ. ಈಗ ಅದರ ಹೆಸರು ಶಾಂತಿಸಾಗರ ೨೮

ಕೋಳಿಪುಕುಳಿಯಲ್ಲೇ—ಇನ್ನೂ ನಸುಕಿನಲ್ಲೇ ೩೦

ಕೆಂಗಲು—ಕೆಂಪು ಮಣ್ಣಿನ ಹೊಲ ೩೨

ಜೌಗು—ಹೆಚ್ಚು ನೀರಿನಿಂದ ಜಿಡ್ಡುಬಿದ್ದ (ಕೆಟ್ಟುಹೋದ) ನೆಲ ೩೨

ಹುಲಿಮನೆ—ಹಳ್ಳಿಗರು ಆಡುವ ಒಂದು ಬಗೆಯ ಆಟ; ಚದುರಂಗದ ಮಾದರಿಯದು ೩೮

ಸಂಪದ ಪ್ರಕಟಣೆಗಳು

ಪರಿವೃತ್ತ

ತೀರ

ಬಾಗಿಲು ಬಡಿವ ಜನ

ಗುಂಪಿನಲ್ಲಿ ಕಂಡ ಮುಖ

ಸರಿಯುವ ತೆರೆಗಳು

ಮೊಖ್ತಾ

ಕವನ ಬರೆಯುವುದು ಪ್ರಕಟಿಸುವುದು ನನ್ನ ಸಮಸ್ಯೆಯಲ್ಲ. ಬರೆದು ಪ್ರಕಟಿಸಿದ ನ ಕವನಗಳನ್ನು ಜನಗಳಿಗೆ ಹೇಗೆ ತಲುಪಿಸುವುದು ಎಂಬುದು ನನ್ನ ಸಮಸ್ಯೆ.

ಹಾಕಿದ ಹಣವನ್ನು ಹೇಗೋ ಹಿಂದಿರುಗಿಸಿಕೊಳ್ಳಬಹುದು. ಅದು ಮುಖ್ಯವಲ್ಲ. ಆದರೆ ಬರೆದ ಕವನ ನಮ್ಮ ಜನಗಳ ಮಧ್ಯೆ ಬೆರೆಯದೇ ಹೋಯಿತೆಂದರೆ ಕವನ ಬರೆಯು ವುದು, ಅದ್ದೂರಿಯಾಗಿ ಮುದ್ರಿಸುವುದು, ಪಾಂಡಿತ್ಯಪೂರ್ಣ ವಿಮರ್ಶೆ ಮಾಡಿಸಿ ಕೊಂಡು ಸಂತೃಪ್ತರಾಗುವುದು–ಕೇವಲ ಅರ್ಥಹೀನ.

ಕವಿ ತನ್ನ ಓದುಗರೊಂದಿಗೆ ನೇರ ಸಂಬಂಧ ಹೇಗೆ ಏರ್ಪಡಿಸಿಕೊಳ್ಳುವುದು? ವಿಮರ್ಶಕರ 'ಸಹಾಯ ಸಹಕಾರ'ಗಳಿಲ್ಲದೆಯೂ ಕವಿ ಹೇಗೆ ಹೃದಯವಂತರ ಅಪಾರ ಸಮೂಹ ಒಂದಕ್ಕೆ ತನ್ನ ಕವನಸೂಕ್ಷ್ಮಗಳನ್ನು ತಲುಪಿಸುವುದು? ಎಷ್ಟೇ ವಯಸ್ಸಾದರೂ ಮೇರೆ ಮೀರದ ನಮ್ಮ ವೈಭವಪೂರ್ಣ ಪ್ರಕಟಣೆಗಳು ವ್ಯಂಗ್ಯಗಳೋ ವಿಡಂಬನೆಗಳೋ? ಕಾವ್ಯ ಎಲ್ಲರಿಗೂ ಅಲ್ಲ ಎಂಬ ದಿವ್ಯವಾಣಿ ಪಕ್ಕಾ ಆತ್ಮವಂಚನೆ ಯಾಕಿರಬಾರದು? ಮೇಲ್ನೋಟಕ್ಕೆ ಸರಳವಾಗಿ ತೋರಿಯೂ ಒಳ್ಳೆಯಕಾವ್ಯ ಸಾಧ್ಯ ವಾಗಬಹುದಲ್ಲವೆ?

ಈ ಬಗೆಯ ವಿಚಾರಗಳು ನನ್ನ ರಚನೆಗಳನ್ನು ನಡೆಸುತ್ತಿವೆ ಎಂದಿಷ್ಟು ಮಾತ್ರ ನನಗಿಲ್ಲಿ ಹೇಳಲಿಕ್ಕಿತ್ತು.

ಎಚ್. ಎಸ್. ವಿ.

ವಿತರಣೆ : ಅಕ್ಷರ ಪ್ರಕಾಶನ ಸಾಗರ ಕರ್ನಾಟಕ ರಾಜ್ಯ

31

28
×16
168
+140
448